MANUVIKASA

# ಮನುವಿಕಾಸ

EdelGive Foundation
An Edelweiss Initiative

ಸಂಪಾದಕರು : ಗಣಪತಿ ಭಟ್ಟ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾಪತ್ರ

ಸಂಪುಟ – 4
ಸಂಚಿಕೆ – 5
ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಂಪಾದಕೀಯ ಮಂಡಳಿ : ಶ್ರೀಮತಿ ಶುಭಾ ಪೈ, ಗಣಪತಿ ಹೆಗಡೆ, ಶ್ರೀಕಾಂತ ಹೆಗಡೆ, ಶಿಲ್ಪಾ ಶಾಸ್ತ್ರಿ

## ಅಂದಲಗಿ ಗ್ರಾಮದ ಕೆರೆಗೆ ಬಾಗಿನ ಸಮರ್ಪಣೆ

ಮನುವಿಕಾಸ ಸಂಸ್ಥೆಯು ಹೆಚ್.ಡಿ.ಬಿ. ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್ ಸಂಸ್ಥೆಯ ಸಹಯೋಗದಲ್ಲಿ 2021–22ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನ ನಾಗನೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಅಂದಲಗಿ ಗ್ರಾಮದ ಜಿಗಳಿ ಕೆರೆಯನ್ನು ರೈತರ ಸಹಭಾಗಿತ್ವದಲ್ಲಿ ಉಚಿತವಾಗಿ ಹೂಳೆತ್ತಿ ಅಭಿವೃದ್ಧಿಪಡಿಸಲಾಗಿತ್ತು. ರೈತರು ಹೂಳೆತ್ತಿದ ಮಣ್ಣನ್ನು ತಮ್ಮ ಜಮೀನಿಗೆ ಒಯ್ದು ಉತ್ತಮ ಫಸಲನ್ನು ಕೂಡ ಪಡೆದುಕೊಂಡಿದ್ದಾರೆ. ಈ ಬಾರಿ ಉತ್ತಮ ಮಳೆಯಾಗಿದ್ದು ಕೆರೆಯಲ್ಲಿ ಸ್ವಚ್ಛಂದವಾಗಿ ನೀರು ತುಂಬಿಕೊಂಡು ಕೋಡಿ ಮೂಲಕ ಕೆರೆಯ ಹೆಚ್ಚುವರಿ ನೀರು ಜಮೀನಿಗೆ ಹಾಯ್ದು ಹೋಗುತ್ತಿದ್ದು ರೈತರ ಮೊಗದಲ್ಲಿ ಸಂತಸ ತಂದಿದೆ. ದಿನಾಂಕ 17/07/2022 ರಂದು ಕೆರೆಗೆ ಬಾಗಿನ ಅರ್ಪಿಸುವ ಕಾರ್ಯಕ್ರಮವನ್ನು ರೈತರು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಯಲ್ಲಾಪುರ–ಮುಂಡಗೋಡ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ವಿ.ಎಸ್.ಪಾಟೀಲ್ ಹಾಗೂ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕೆರೆಗೆ ಬಾಗಿನ ಅರ್ಪಿಸಿದ ಶ್ರೀ ವಿ.ಎಸ್.ಪಾಟೀಲ್ ಮಾತನಾಡಿ, "ಮನುವಿಕಾಸ ಸಂಸ್ಥೆಯ ಕೆರೆ ಪುನರುಜ್ಜೀವನ ಕಾರ್ಯವು ಮಾದರಿ ಕೆಲಸವಾಗಿದ್ದು ಈ ಯೋಜನೆಯಿಂದಾಗಿ ಸಾಕಷ್ಟು ರೈತರು ಅನುಕೂಲವನ್ನು ಪಡೆದುಕೊಂಡಿದ್ದಾರೆ. ಕೆರೆಗೆ ಬಾಗಿನ ಅರ್ಪಿಸುವುದರಿಂದ ಜನರಲ್ಲಿ ಕೆರೆಗಳ ಬಗ್ಗೆ ಪೂಜ್ಯನೀಯ ಭಾವನೆ ಮೂಡುತ್ತದೆ" ಎಂದು ಅಭಿಪ್ರಾಯಪಟ್ಟರು. ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಮಾತನಾಡಿ, "ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದ ಮೇಲೆ ಕೆರೆಗಳ ಸಂರಕ್ಷಣೆಯು ಊರಿನ ಗ್ರಾಮಸ್ಥರು ಹಾಗೂ ಸ್ಥಳೀಯ ಗ್ರಾಮ ಪಂಚಾಯತದ ಹೊಣೆಗಾರಿಕೆ ಆಗಿರುತ್ತದೆ. ಕೆರೆಗಳನ್ನು ಸಮರ್ಪಕ ರೀತಿಯಲ್ಲಿ ಬಳಸಿ ಹೆಚ್ಚಿನ ಅನುಕೂಲತೆಯನ್ನು ಪಡೆದುಕೊಳ್ಳಿ" ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಅಂದಲಗಿ ಗ್ರಾಮದ ರೈತ ಬಂಧುಗಳು, ಹಿರಿಯರು, ಮಹಿಳೆಯರು ಹಾಗೂ ಗ್ರಾಮ ಪಂಚಾಯತ್ ಸದಸ್ಯರು ಉಪಸ್ಥಿತರಿದ್ದರು.



## ಯಲ್ಲಾಪುರದಲ್ಲಿ ಮನುವಿಕಾಸದಿಂದ ಮಹಿಳಾ ಸಮಾವೇಶ ಆಯೋಜನೆ



ಮನುವಿಕಾಸ ಸಂಸ್ಥೆಯು ಈಡಲ್‌ಗೀವ್ ಫೌಂಡೇಶನ್ ಹಾಗೂ ದಲ್ಯಾನ ಫೌಂಡೇಶನ್‌ಗಳ ಸಹಯೋಗದೊಂದಿಗೆ ದಿನಾಂಕ 11–12–2022 ರಂದು ಯಲ್ಲಾಪುರ ತಾಲೂಕಿನ ಎ.ಪಿ.ಎಂ.ಸಿ ರೈತ ಸಭಾಭವನದಲ್ಲಿ ಮಹಿಳಾ ಸಮಾವೇಶ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಮಿಕ ಸಚಿವರಾದ ಶ್ರೀ ಶಿವರಾಮ ಹೆಬ್ಬಾರವರು ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿ, "ಎರಡು ದಶಕಗಳಿಂದ ಮನುವಿಕಾಸ ಸಂಸ್ಥೆಯು ಕೆರೆ ಹೂಳೆತ್ತುವುದು, ಸ್ವ ಉದ್ಯೋಗಕ್ಕೆ ಉತ್ತೇಜನ, ಶಿಕ್ಷಣಕ್ಕೆ ಪ್ರೋತ್ಸಾಹ ಇನ್ನಿತರ ಅಭಿವೃದ್ಧಿಪರ ಕಾರ್ಯಚಟುವಟಿಕೆಗಳನ್ನು ತಳಮಟ್ಟದ ಜನಸಮುದಾಯಕ್ಕಾಗಿ ಹಮ್ಮಿಕೊಳ್ಳುತ್ತಾ ಬಂದಿದೆ. ಮಹಿಳೆಯರಿಗೆ ಸ್ವ–ಸಹಾಯ ಸಂಘಗಳ ಮೂಲಕ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸಲು ಹೊಲಿಗೆ, ಬ್ಯೂಟೀಶಿಯನ್, ಆಹಾರ ತಯಾರಿಕಾ ತರಬೇತಿಗಳನ್ನು ಆಯೋಜಿಸಿ ಅವರು ಸ್ವ ಉದ್ಯೋಗಶೀಲರಾಗುವಂತೆ ಸಂಸ್ಥೆ ಮಾಡಿದೆ. ಬಡವರಿಗೆ, ವಿದ್ಯೆಯಿಂದ ವಂಚಿತರಾದವರಿಗೆ ಸಹಾಯಮಾಡಿ ನೆಮ್ಮದಿಯ ವಾತಾವರಣವನ್ನು ಕಲ್ಪಿಸಲು ಶ್ರಮಿಸುತ್ತಾ ಬಂದಿದ್ದು, ಯಲ್ಲಾಪುರ ತಾಲೂಕಿನ ಸಿದ್ದಿ ಸಮುದಾಯದವರ ಆರ್ಥಿಕತೆ ಸುಧಾರಿಸುವುದಕ್ಕೋಸ್ಕರ ಹೊಸ ಯೋಜನೆಯನ್ನು ಜಾರಿಗೆ ತಂದು ಕಾರ್ಯಗತಗೊಳಿಸುತ್ತಿದ್ದು ಸಿದ್ದಿ ಸಮುದಾಯದಂತಹ ಬುಡಕಟ್ಟು ಜನಾಂಗದವರಿಗೆ ಹೆಚ್ಚಿನ ಅಭಿವೃದ್ಧಿ ಹೊಂದಲು ಈ ಯೋಜನೆಯು ಸಾಕಾರಗೊಳ್ಳಲಿದೆ ಎಂದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತನಾಡಿ, ಕಳೆದ 19 ವರ್ಷಗಳಿಂದ ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ, ಧಾರವಾಡ ಉಡುಪಿ ಸೇರಿದಂತೆ 5 ಜಿಲ್ಲೆಗಳಲ್ಲಿ ಸಮಾಜಮುಖಿ ಕೆಲಸಗಳ ಮೂಲಕ ನೇರವಾಗಿ 65000 ಕುಟುಂಬಗಳ ಜೊತೆ ಕೆಲಸ

3ನೇ ಪುಟಕ್ಕೆ

## ಆತ್ಮೀಯ ಓದುಗರೇ...



ಮನುವಿಕಾಸದ ಈ ನೂತನ ಸಂಚಿಕೆಯನ್ನು ತಮ್ಮ ಮುಂದಿಡಲು ನನಗೆ ಅತೀವ ಸಂತಸವೆನಿಸುತ್ತಿದೆ. ಪರಿಸರ ಸಂರಕ್ಷಣೆ, ಮಹಿಳಾ ಸಬಲೀಕರಣ, ಶಿಕ್ಷಣ, ಆರೋಗ್ಯ ಈ ಮೊದಲಾದ ಕ್ಷೇತ್ರಗಳಲ್ಲಿ 2003ನೇ ಇಸವಿಯಿಂದ ಸಮಾಜಮುಖಿ ಕಾರ್ಯ ಆರಂಭಿಸಿ 20 ವರ್ಷಗಳನ್ನು ಪೂರೈಸುತ್ತಾ ಬಂದಿದೆ. ಮನುವಿಕಾಸ ಸಂಸ್ಥೆಯು ಈಗಾಗಲೇ 180 ಕೆರೆಗಳನ್ನು ರೈತರ ಸಹಭಾಗಿತ್ವದಲ್ಲಿ ಉಚಿತವಾಗಿ ಹೂಳೆತ್ತಿ ಅಭಿವೃದ್ಧಿಪಡಿಸಿದ್ದು, 2022–23 ನೇ ಸಾಲಿನಲ್ಲಿ ಹುಬ್ಬಳ್ಳಿ, ಕುಂದಗೋಳ, ಶಿಗ್ಗಾಂವಿ, ಅಳ್ನಾವರ, ಬ್ಯಾಡಗಿ, ಹೀರೆಕೆರೂರ, ಶಿಕಾರಿಪುರ ತಾಲೂಕುಗಳನ್ನು ಹೊಸದಾಗಿ ಸೇರ್ಪಡೆ ಮಾಡಿಕೊಂಡು ಕೆರೆಗಳನ್ನು ಪುನರುಜ್ಜೀವನಗೊಳಿಸುವ ಗುರಿಯನ್ನು ಹೊಂದಿದ್ದೇವೆ. ನೀರಿನ ಲಭ್ಯತೆಯನ್ನು ಹೆಚ್ಚಿಸಿ ರೈತಾಪಿ ವರ್ಗದವರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕೃಷಿಹೊಂಡ, ಬೆಟ್ಟದಕೆರೆಗಳನ್ನು ನಿರ್ಮಾಣ ಮಾಡಿಕೊಡುತ್ತಿದ್ದೇವೆ. ಈಡಲ್‌ಗೀವ್ ಫೌಂಡೇಶನ್ ಮತ್ತು ದಲ್ಯಾನ್ ಫೌಂಡೇಶನ್ ಸಹಯೋಗದೊಂದಿಗೆ ಮಹಿಳಾ ಸ್ವ ಸಹಾಯ ಸಂಘಗಳನ್ನು ರಚಿಸಿ, ಮಹಿಳೆಯರಿಗೆ ಅಭಿವೃದ್ಧಿಪರ ಚಟುವಟಿಕೆಗಳನ್ನು ರೂಪಿಸಿ, ಸ್ವ ಉದ್ಯೋಗಿಗಳನ್ನಾಗಿ ಮಾಡಲು ಹೊಲಿಗೆ ತರಬೇತಿ, ಬ್ಯೂಟೀಶಿಯನ್ ತರಬೇತಿ, ಹೈನುಗಾರಿಕಾ ತರಬೇತಿ, ಅಡಿಗೆ ತರಬೇತಿಯನ್ನು ನೀಡಿ ಮಹಿಳೆಯರನ್ನು ಉದ್ಯಮಶೀಲರನ್ನಾಗಿಸಿದ್ದೇವೆ. ಮನುವಿಕಾಸ ಸಂಸ್ಥೆಯು ಹನ್ಸ್ ಸೀಡಲ್ ಫೌಂಡೇಶನ್ ಎಂಬ ಜರ್ಮನಿಯ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ಹವಾಮಾನ ಬದಲಾವಣೆಯಿಂದ ಕೃಷಿಯಲ್ಲಿ ಉಂಟಾಗುತ್ತಿರುವ ಸಮಸ್ಯೆಗಳನ್ನು ಅಧ್ಯಯನ ಮಾಡಿ ರೈತರಿಗೆ ರಾಜ್ಯಮಟ್ಟದ ವಿಚಾರ ಸಂಕೀರ್ಣ, ಕ್ಷೇತ್ರ ಭೇಟಿ ಹಾಗೂ 'ಸುಸ್ಥಿರ ಪರಿಸರ ಮತ್ತು ದಕ್ಷ ನೀರಿನ ಬಳಕೆಯ ಕೃಷಿ ಪದ್ಧತಿಗಳು' ಎಂಬ ಕಾರ್ಯಾಗಾರಗಳನ್ನು ಆಯೋಜಿಸಿ ರೈತರಲ್ಲಿ ಜಾಗೃತಿಯನ್ನು ಮೂಡಿಸಿದೆ, ಆ ಕುರಿತ ಮಾಹಿತಿಯು ಸಂಚಿಕೆಯಲ್ಲಿ ಅಡಕವಾಗಿದೆ. ಹೆಚ್.ಡಿ.ಎಫ್.ಸಿ. ಬ್ಯಾಂಕ್ ಪರಿವರ್ತನ್ ಇವರ ಸಹಯೋಗದೊಂದಿಗೆ ಮನುವಿಕಾಸ ಸಂಸ್ಥೆಯು ಯಲ್ಲಾಪುರ ತಾಲೂಕಿನ ಸಿದ್ದಿ ಸಮುದಾಯದ ಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಜೇನು ಸಾಕಾಣಿಕೆಗೆ, ತೋಟಗಾರಿಕೆ, ಕೋಳಿ ಸಾಕಾಣಿಕೆಗೆ ಉತ್ತೇಜನ ನೀಡಿದೆ. ಸಿದ್ದಿ ಸಮುದಾಯದ ಯುವಕ–ಯುವತಿಯರಿಗೆ ಆತಿಥ್ಯ ತರಬೇತಿಯನ್ನು ನೀಡಿದೆ. ಜೇನು ತುಪ್ಪ ಹಾಗೂ ಸ್ವ ಸಹಾಯ ಸಂಘದ ಮಹಿಳೆಯರು ತಯಾರಿಸಿದ ವಿವಿಧ ಖಾದ್ಯದ ಉತ್ಪನ್ನಗಳೂ ಸಹ ಮಾರುಕಟ್ಟೆಯಲ್ಲಿ ಲಭ್ಯವಿದೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ಮಹಿಳಾ ಮೀನು ಮಾರಾಟಗಾರರಿಗೆ ಸ್ವ ಸಹಾಯ ಸಂಘಗಳನ್ನು ರಚಿಸಿ ಒಣ ಮೀನು ಸಂಸ್ಕರಣಾ ಘಟಕ, ಪಂಜರು ಮೀನು ಕೃಷಿಗೆ ಸಹಾಯಧನವನ್ನು ನೀಡಿ ಪ್ರೋತ್ಸಾಹಿಸಿದೆ. ಯಲ್ಲಾಪುರ ಹಾಗೂ ಕುಂದಾಪುರ ತಾಲೂಕಿನಲ್ಲಿ ರೈತ ಉತ್ಪಾದಕ ಕಂಪನಿಯನ್ನು ಆರಂಭಿಸುವ ಇಂಗಿತವನ್ನು ಸಂಸ್ಥೆಯು ಹೊಂದಿದೆ. ಫೌಂಡೇಶನ್ ಫಾರ್ ಎಕಾಲಾಜಿಕಲ್ ಸೆಕ್ಯೂರಿಟಿ ಸಂಸ್ಥೆಯ(FES) ಸಹಯೋಗದೊಂದಿಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಹಾಗೂ ಸಿದ್ದಾಪುರ ತಾಲೂಕುಗಳಲ್ಲಿನ ಸಮುದಾಯ ಆಸ್ತಿಯನ್ನು ಗುರುತಿಸಿ, ನಕ್ಷೀಕರಿಸಿ, ಸಮಿತಿಗಳನ್ನು ರಚಿಸಿದ್ದು ಈ ಕುರಿತ ಮಾಹಿತಿಯೂ ವಾರ್ತಾಪತ್ರದಲ್ಲಿ ಒಳಗೊಂಡಿದೆ. ಅಡಿಕೆ ಬೆಳೆಗಾರರು, ಮೀನು ಮಾರಾಟಗಾರರು, ತರಕಾರಿ ಉತ್ಪಾದಕರಿಗೆ ಸಹಾಯಕವಾಗಲು ಶಿರಸಿ, ಕಾರವಾರ, ಗೋಕರ್ಣಗಳಲ್ಲಿ ರೈತ ಉತ್ಪಾದಕ ಸಂಘಗಳನ್ನು ಮನುವಿಕಾಸ ಸಂಸ್ಥೆಯು ಆರಂಭಿಸಿ ಸಂಘದ ಸದಸ್ಯರು ಹಾಗೂ ಕೃಷಿಕರಿಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿದೆ. ಯಲ್ಲಾಪುರ ತಾಲೂಕಿನಲ್ಲಿ ಜಿಲ್ಲೆಯಲ್ಲೇ ಮೊದಲ ಬಾರಿಗೆ ಸಿದ್ದಿ ಸಮುದಾಯ ಹಾಗೂ ಬುಡಕಟ್ಟು ಜನಾಂಗದವರಿಗಾಗಿ ಅನುಕೂಲವಾಗುವಂತೆ ಸಹಕಾರಿ ಬ್ಯಾಂಕ್‌ನ್ನು ಸ್ಥಾಪಿಸಲು ಮುಂದಾಗಿದೆ. ಆ ಕುರಿತ ಮಾಹಿತಿಯು ಹೊತ್ತಿಗೆಯಲ್ಲಿ ಅಡಕವಾಗಿದೆ.

**'ನಮಗಾಗಿ ನಾವು ಏನು ಮಾಡುತ್ತೇವೆ ಅದು ನಮ್ಮೊಂದಿಗೆ ಕೊನೆಗೊಳ್ಳುತ್ತದೆ, ಸಮಾಜಕ್ಕೆ ನೀಡಿದ ಸೇವೆ ಶಾಶ್ವತವಾಗಿ ಉಳಿಯುತ್ತದೆ'** ಮನುವಿಕಾಸ ಸಂಸ್ಥೆಯು ಎರಡು ದಶಕಗಳನ್ನು ಪೂರೈಸುವ ಹೊಸ್ತಿಲಲ್ಲಿದೆ. ಸಂಸ್ಥೆಯ ಆರಂಭದಿಂದ ಇಲ್ಲಿಯವರೆಗೆ ಸಂಸ್ಥೆಯ ಶ್ರೇಯೋಭಿವೃದ್ಧಿಯಲ್ಲಿ, ಕಷ್ಟ ಕಾರ್ಪಣ್ಯದ ಸಂದರ್ಭದಲ್ಲಿ ಸದಾ ನಮ್ಮೊಂದಿಗಿದ್ದು ಬೆಂಬಲಿಸಿ ಪ್ರೋತ್ಸಾಹಿಸಿದ ನಿರ್ದೇಶಕ ಮಂಡಳಿಯವರಿಗೆ, ಸಲಹಾ ಮಂಡಳಿಯವರಿಗೆ, ಅಧಿಕಾರಿ ವರ್ಗದವರಿಗೆ, ರೈತ ಬಂಧುಗಳಿಗೆ, ಪೋಷಿಸಿದ ಎಲ್ಲಾ ಸಂಸ್ಥೆಗಳಿಗೆ, ಹಗಲಿರುಳೆನ್ನದೆ ಶ್ರಮಿಸುತ್ತಿರುವ ಸಂಸ್ಥೆಯ ಸಿಬ್ಬಂದಿಗಳಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಇದೇ ರೀತಿ ಕಾಲ ಕಾಲಕ್ಕೆ ತಮ್ಮ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿ ಎಂದು ಹೇಳುತ್ತಾ ತಮ್ಮೆಲ್ಲರಿಗೂ ಧನ್ಯವಾದವನ್ನು ಅರ್ಪಿಸುತ್ತಿದ್ದೇನೆ.

**ವಂದನೆಗಳೊಂದಿಗೆ,**
**ಶ್ರೀ ಗಣಪತಿ ಭಟ್ಟ**
**ನಿರ್ದೇಶಕರು, ಮನುವಿಕಾಸ ಸಂಸ್ಥೆ, ಶಿರಸಿ**

1 ನೇ ಪುಟದಿಂದ




ನಿರ್ವಹಿಸುತ್ತಾ ಬಂದಿದೆ. ಸಂಸ್ಥೆಯು ಎಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ್ ಇವರ ಸಹಯೋಗದೊಂದಿಗೆ ಯಲ್ಲಾಪುರ ತಾಲೂಕಿನ 1600 ಸಿದ್ದಿ ಸಮುದಾಯದ ಕುಟುಂಬಗಳಲ್ಲಿ 1000 ಕುಟುಂಬಗಳನ್ನು ಆಯ್ಕೆ ಮಾಡಿ ಅವರ ಏಳ್ಗೆಗೋಸ್ಕರ ಕೃಷಿ ರಂಗದಲ್ಲಿ ಹೆಚ್ಚಿನ ಅಭಿವೃದ್ಧಿ ಹೊಂದಲು ಉಚಿತವಾಗಿ ಅಡಿಕೆ ಸಸಿ, ಪಂಪ್ ಸೆಟ್, ಪಿವಿಸಿ ಪೈಪ್‌ಗಳನ್ನು ವಿತರಿಸಿದ್ದು ಜೇನು ಪೆಟ್ಟಿಗೆಗಳನ್ನು ಸಹ ನೀಡಲಾಗಿದೆ. ಶುದ್ಧ ಜೇನುತುಪ್ಪವನ್ನು ಸಿದ್ದಿ ಜನರಿಂದ ಖರೀದಿಸಿ ಮೌಲ್ಯವರ್ಧನೆ ಮಾಡಿ ಮಾರುಕಟ್ಟೆ ನೀಡುತ್ತಿದೆ ಎಂದು ಹೇಳಿದರು". ಯುವಕರಿಗೆ ಒಳ್ಳೆಯ ಉದ್ಯೋಗಾವಕಾಶ ಕಲ್ಪಿಸಲು ಆತಿಥ್ಯ ನಿರ್ವಹಣಾ ತರಬೇತಿ ನೀಡಿದೆ. ಸ್ವ ಉದ್ಯೋಗವನ್ನು ಮಾಡುವ ಆಸಕ್ತರಿಗೆ ಅಗತ್ಯ ಪರಿಕರಗಳನ್ನು ಅಂದರೆ ಫ್ರಿಜ್, ತಳ್ಳುವ ಗಾಡಿ, ಹೊಲಿಗೆ ಯಂತ್ರ ಈ ಮೊದಲಾದ ಸಲಕರಣೆಗಳನ್ನು ಉಚಿತವಾಗಿ ನೀಡಿ ಸ್ವ ಉದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದೆ. ಬುಡಕಟ್ಟು ಜನಾಂಗಗಳ ಅನುಕೂಲಕ್ಕಾಗಿ ಯಲ್ಲಾಪುರದಲ್ಲಿ ಪ್ರಗತಿನಿಧಿ ಸೌಹಾರ್ದ ಸಂಘವನ್ನು ರಚಿಸಿಕೊಟ್ಟಿದೆ. ವಿಧಾನಪರಿಷತ್ ಸದಸ್ಯರಾದ ಶ್ರೀ ಶಾಂತಾರಾಮ ಸಿದ್ದಿ ಮಾತನಾಡಿ, ಬುಡಕಟ್ಟು ಜನಾಂಗದವರು ಉತ್ತರ ಕನ್ನಡ, ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು ಭಾಗಗಳಲ್ಲಿ ನೆಲೆಸಿದ್ದು ಮೂಲಭೂತ ಸೌಕರ್ಯಗಳ ಕೊರತೆಯಿಂದ ತೊಂದರೆಗೀಡಾಗಿದ್ದಾರೆ. ಮನುವಿಕಾಸ ಸಂಸ್ಥೆಯು ಬುಡಕಟ್ಟು ಜನಾಂಗದವರ ಶ್ರೇಯೋಭಿವೃದ್ಧಿಗಾಗಿ ಆತಿಥ್ಯ ತರಬೇತಿಗಳನ್ನು ನೀಡಿ ಸಿದ್ದಿ ಸಮುದಾಯದ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಿರುವುದು ಶ್ಲಾಘನೀಯ ಎಂದರು. ಕೃಷಿ ಹಾಗೂ ಸ್ವ ಉದ್ಯೋಗಕ್ಕೆ ಸಲಕರಣೆಗಳನ್ನು ನೀಡಿ ಆರ್ಥಿಕ ಅಭಿವೃದ್ಧಿಯಲ್ಲಿ ಸಮುದಾಯಕ್ಕೆ ಬೆನ್ನೆಲುಬಾಗಿ ನಿಂತಿದೆ. ಬುಡಕಟ್ಟು ಜನಾಂಗದವರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರವರ ಕಾರ್ಯ ಅಭಿನಂದನಾರ್ಹ. ಮನುವಿಕಾಸ ಸಂಸ್ಥೆಯು ಇನ್ನೂ ಹೆಚ್ಚಿನ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು. ಈ ಸಮಾವೇಶದಲ್ಲಿ ಸಿದ್ದಿ ಸಮುದಾಯಕ್ಕೆ ಸಂಬಂಧಿಸಿದ ಪುಗುಡಿ, ಡಮಾಮಿ ಇತರ ಸಾಂಸ್ಕೃತಿಕ ನೃತ್ಯ ಪ್ರಾಕಾರಗಳನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಸುನಂದಾ ದಾಸ್, ಶ್ರೀಮತಿ ನಾಗವೇಣಿ ಸಿದ್ದಿ, ಡಾ. ಸೌಮ್ಯಾ ವಿ.ಕೆ, ಡಾ. ಕೃಷ್ಣಮೂರ್ತಿ ಕೆ.ವಿ, ಶ್ರೀ ಜಯರಾಮ ಸಿದ್ದಿ, ಕುಮಾರಿ ಚಿತ್ರಾ ಎಮ್. ಗೌಂಡಾಳಕರ್, ಶ್ರೀ ಲಾರೆನ್ಸಾ ಸಿದ್ದಿ, ಶ್ರೀಮತಿ ಸುಜಾತಾ ಸಿದ್ದಿ, ಶ್ರೀ ರೋಬಿ ಸಿದ್ದಿ, ಶ್ರೀಮತಿ ಗೀತಾ ಪಾಟೀಲ, ಶ್ರೀಮತಿ ಪುಷ್ಪಾ ಹಂಚಿಗಿ, ಶ್ರೀ ಸಂಜೀವ ಕುಲಕರ್ಣಿ, ಸುಮಾರು 800 ಕ್ಕೂ ಅಧಿಕ ಸ್ವ ಸಹಾಯ ಸಂಘದ ಮಹಿಳೆಯರು ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





# ಮನುವಿಕಾಸದಿಂದ ರೈತ ಸಮುದಾಯಕ್ಕಾಗಿ 'ಸುಸ್ಥಿರ ಪರಿಸರ ಮತ್ತು ದಕ್ಷ ನೀರಿನ ಬಳಕೆಯ ಕೃಷಿ ಪದ್ಧತಿಗಳು' ಕಾರ್ಯಾಗಾರ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆ, ಶಿರಸಿ ಹಾಗೂ ಹನ್ಸಸೀಡೆಲ್ ಫೌಂಡೇಶನ್ ಇಂಡಿಯಾ ಸಹಯೋಗದೊಂದಿಗೆ ರೈತರಿಗಾಗಿ 'ಸುಸ್ಥಿರ ಪರಿಸರ ಮತ್ತು ದಕ್ಷ ನೀರಿನ ಬಳಕೆಯ ಕೃಷಿ ಪದ್ಧತಿಗಳು' ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರವನ್ನು ಶಿರಸಿ, ಮುಂಡಗೋಡ ಮತ್ತು ಕಲಘಟಗಿ ತಾಲೂಕುಗಳಲ್ಲಿ ಆಯೋಜಿಸಿತ್ತು.

| ಕ್ರಮ ಸಂಖ್ಯೆ | ಸ್ಥಳ | ದಿನಾಂಕ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|
| 1 | ಕಲಘಟಗಿ | 26/07/2022 | 58 |
| 2 | ದಾಸನಕೊಪ್ಪ | 16/08/2022 | 58 |
| 3 | ಮುಂಡಗೋಡ | 26/08/2022 | 62 |





ಕಾರ್ಯಾಗಾರದಲ್ಲಿ ಧಾರವಾಡದ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು ಮತ್ತು ಹಿರಿಯ ವಿಜ್ಞಾನಿಗಳಾದ ಡಾ. ಎಸ್ ಎ ಬೀರಾದಾರ್. ನಿವೃತ್ತ ಕೃಷಿ ಉಪ ನಿರ್ದೇಶಕರಾದ ಶ್ರೀ ಶಂಕರ ಹೆಗಡೆ ಸೇರಿದಂತೆ ತೋಟಗಾರಿಕೆ ಮತ್ತು ಕೃಷಿ ಇಲಾಖೆಯ ಇನ್ನಿತರ ವಿಷಯ ಪರಿಣಿತರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ತಮ್ಮ ಅನುಭವಗಳನ್ನು ರೈತರ ಜೊತೆ ಹಂಚಿಕೊಂಡರು. ಕೃಷಿ ಕ್ಷೇತ್ರದಲ್ಲಿ ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಸಾಧನೆಗೈದು ಪ್ರಶಸ್ತಿ ಪುರಸ್ಕೃತರಾದ ಪ್ರಗತಿಪರ ರೈತರು ಸಹ ಕಾರ್ಯಾಗಾರದಲ್ಲಿ ಭಾಗವಹಿಸಿ ತಮ್ಮ ಅನುಭವ ಹಂಚಿಕೊಳ್ಳುವ ಮೂಲಕ ಕೃಷಿಯಲ್ಲಿನ ವಿವಿಧ ಹೊಸ ಆಯಾಮಗಳನ್ನು ಕಟ್ಟಿಕೊಡಲು ನೆರವಾದರು.

**ಕಾರ್ಯಾಗಾರದ ಮುಖ್ಯ ಉದ್ದೇಶಗಳು:**

* ಸುಸ್ಥಿರ ಕೃಷಿ ಮತ್ತು ಅದರ ಮಹತ್ವವನ್ನು ಅರಿಯುವುದು ಮತ್ತು ರೈತರಿಗೆ ಅದರ ಅನುಕೂಲಗಳನ್ನು ತಿಳಿಸಿಕೊಡುವುದು.
* ಸಮಗ್ರ ನೀರಿನ ನಿರ್ವಹಣೆಯ ಮಹತ್ವ ಹಾಗೂ ಅದರ ಉಪಯೋಗಗಳು.
* ಲಭ್ಯವಿರುವ ನೀರಿನ ಸಮರ್ಪಕ ಮತ್ತು ದಕ್ಷ ಬಳಕೆ, ನೀರಿಂಗಿಸುವಿಕೆ, ಕೃಷಿ ಹೊಂಡಗಳ ನಿರ್ಮಾಣ ಮತ್ತು ಕೆರೆಯ ಪುನರುಜ್ಜೀವನದ ಉಪಯೋಗಗಳು.
* ಆಧುನಿಕ ತಂತ್ರಜ್ಞಾನದ ಮೂಲಕ ಕೃಷಿ ಪದ್ಧತಿಗಳ ಅವಲೋಕನ.
* ಹವಾಮಾನ ಬದಲಾವಣೆಯಿಂದ ಕೃಷಿ ಪದ್ಧತಿಗಳ ಬದಲಾವಣೆ ಮತ್ತು ಬೆಳೆಗಳ ಬದಲಾವಣೆಗೆ ಕಾರಣಗಳನ್ನು ಅರಿಯುವಿಕೆ.
* ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳಿಂದ ಮತ್ತು ಸರಕಾರದ ಬೇರೆ ಬೇರೆ ವಲಯಗಳಿಂದ ಸುಸ್ಥಿರ ಕೃಷಿಗೆ ಇರುವ ಸೌಲಭ್ಯಗಳನ್ನು ರೈತರಿಗೆ ತಿಳಿಸಿಕೊಡುವುದು. ಬೆಳೆಗಳ ವಿಮಾ ಸೌಲಭ್ಯ ಮತ್ತು ರಿಯಾಯತಿ ದರದಲ್ಲಿ ಯಂತ್ರೋಪಕರಣಗಳನ್ನು ಪಡೆಯುವಿಕೆಗಳ ಬಗ್ಗೆ.
* ಪರಿಸರ ಸ್ನೇಹಿ ಕೃಷಿ, ಸಾವಯವ ಕೃಷಿ ಮತ್ತು ಅದರ ಮಹತ್ವ, ಮಿಶ್ರ ಕೃಷಿ ಮೊದಲಾದ ಪರಿಸರಸ್ನೇಹಿ ಕೃಷಿ ಪದ್ಧತಿಗಳ ಅವಲೋಕನ.
* ಮಣ್ಣಿನ ಸವೆತಕ್ಕೆ ಕಾರಣಗಳು ಮತ್ತು ತಡೆಗಟ್ಟುವಿಕೆ, ಸಕಾಲದಲ್ಲಿ ಜಮೀನಿನ ಮಣ್ಣಿನ ಪರೀಕ್ಷೆ ಮತ್ತು ವಿಧಗಳು, ಮಣ್ಣಿನ ಆಧಾರಿತ ಕೃಷಿ ಪದ್ಧತಿಗಳ ಅನುಷ್ಠಾನ ಮತ್ತು ಅದರ ಉಪಯೋಗಗಳು, ಪರಿಸರ ಪೂರಕ ಕೃಷಿ ಮತ್ತು ಪರಿಸರ ಸಂರಕ್ಷಣೆಯ ಮಹತ್ವಗಳು, ಹವಾಮಾನ ವೈಪರಿತ್ಯ ಮತ್ತು ಅದರ ದುಷ್ಪರಿಣಾಮಗಳ ಕುರಿತಾದ ಮಾಹಿತಿಯನ್ನು ರೈತ ಸಮುದಾಯಕ್ಕೆ ನೀಡುವುದು.
* ಉಪ ಕಸುಬಿನ ಮೂಲಕ ರೈತರಿಗೆ ಹಲವು ಬಗೆಯ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹೈನುಗಾರಿಕೆ, ಜೇನು ಕೃಷಿ, ಮೊದಲಾದ ಅಭಿವೃದ್ಧಿಪರ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹ.

ಕಾರ್ಯಾಗಾರದಲ್ಲಿ ಪ್ರಗತಿಪರ ರೈತರುಗಳು ತಾವು ಕೃಷಿ ಕ್ಷೇತ್ರಗಳಲ್ಲಿ ಕಂಡುಕೊಂಡ ಹೊಸ ಬದಲಾವಣೆಗಳು, ಸವಾಲುಗಳು, ಅನುಷ್ಠಾನಗೊಳಿಸಲು ಅನುಸರಿಸಿದ ಮಾರ್ಗೋಪಾಯಗಳ ಕುರಿತು ಅನುಭವಗಳ ಹಂಚಿಕೆ ಮಾಡಿಕೊಂಡರು. ಭಾಗವಹಿಸಿದ ರೈತರು ಪರಸ್ಪರ ಸಂವಾದದ ಮೂಲಕ ತಮಗಿರುವ ಸಮಸ್ಯೆಗಳು ಮತ್ತು ಗೊಂದಲಗಳನ್ನು ಬಗೆಹರಿಸಿಕೊಂಡರು.

# ಮನುವಿಕಾಸದಿಂದ ರಿಸ್ಕ್ ಮ್ಯಾನೇಜ್‌ಮೆಂಟ್ ಕುರಿತು ಸಿಬ್ಬಂದಿಗಳಿಗೆ ಒಂದು ದಿನದ ಕಾರ್ಯಾಗಾರದ ಆಯೋಜನೆ




ಮನುವಿಕಾಸ ಸಂಸ್ಥೆ ಹಾಗೂ ಗ್ರೋ ಫಂಡ್ ಸಹಯೋಗದಲ್ಲಿ ದಿನಾಂಕ 14/08/2022 ರಂದು ಶಿರಸಿಯ ಪಂಚವಟಿ ಹೊಟೆಲ್‌ನಲ್ಲಿ ಸಂಸ್ಥೆಯ ಆಯ್ದ 40 ಸಿಬ್ಬಂದಿಗಳಿಗೆ ರಿಸ್ಕ ಮ್ಯಾನೇಜ್‌ಮೆಂಟ್ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಆಗಮಿಸಿದ ಸಿಬ್ಬಂದಿಗಳನ್ನು ಸ್ವಾಗತಿಸಿ ಮಾತನಾಡಿ, ಸವಾಲು ಎಂಬುದು ವೈಯಕ್ತಿಕ ಜೀವನದಲ್ಲಾಗಲಿ ಅಥವಾ ನಿರ್ವಹಿಸುತ್ತಿರುವ ಕೆಲಸದಲ್ಲಾಗಲಿ ಸರ್ವೇಸಾಮನ್ಯವಾಗಿ ಕಾಣುವಂಥದ್ದಾಗಿದೆ. ಪ್ರತಿಯೊಬ್ಬರ ಬದುಕಿನಲ್ಲೂ ಸಹ ರಿಸ್ಕ್ ಎಂಬುದು ಇದ್ದೇ ಇರುತ್ತದೆ. ಸಂಸ್ಥೆಯಲ್ಲಿ ಕೆಲಸವನ್ನು ನಿರ್ವಹಿಸುವಾಗ ವಿವಿಧ ಹಂತಗಳಲ್ಲಿ ರಿಸ್ಕ್‌ಗಳನ್ನು ನಾವು ಕಾಣಬಹುದಾಗಿದ್ದು, ಅನಿರೀಕ್ಷಿತವಾಗಿ ಕೆಲವು ಬಾರಿ ಸವಾಲುಗಳು ಎದುರಾಗುತ್ತವೆ. ಹಲವು ಬಾರಿ ಸವಾಲುಗಳು ನಿರೀಕ್ಷಿತವಾಗಿಯೇ ಇರುತ್ತವೆ. ಸವಾಲುಗಳನ್ನು ನಾವು ಸಣ್ಣ ಮಟ್ಟದ ಸವಾಲು, ಮಧ್ಯಮ ಮಟ್ಟದ ಸವಾಲು, ದೊಡ್ಡ ಮಟ್ಟದ ಸವಾಲುಗಳು ಹೀಗೆ ಮೂರು ಪ್ರಮುಖ ಹಂತಗಳಲ್ಲಿ ವಿಂಗಡಿಸಬಹುದಾಗಿದೆ. ಕೆಲಸದಲ್ಲಿ ರಿಸ್ಕ್ ಗಳು ಬಂದಾಗ ನಾವು ಅಂಜದೇ ಸಮರ್ಥವಾಗಿ ಎದುರಿಸುವಂತಹ ಕಲೆಯನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು ಎಂದು ಹೇಳಿ ತಾವು ಎದುರಿಸಿದಂತಹ ಸವಾಲುಗಳನ್ನು ಒಮ್ಮೆ ಮೆಲುಕು ಹಾಕಿದರು. ಸಂಸ್ಥೆಯ ಸಿಬ್ಬಂದಿಗಳಿಗೆ ತಾವು ನಿರ್ವಹಿಸುತ್ತಿರುವ ಕೆಲಸಗಳಲ್ಲಿನ ಜವಾಬ್ದಾರಿಗಳೇನು? ಅದರಲ್ಲಿನ ಸವಾಲುಗಳು ಏನಿದೆ ? ಎಂಬುದರ ಕುರಿತು ತಮ್ಮ ತಂಡಗಳ ಪರವಾಗಿ ವಿಷಯವನ್ನು ಮಂಡಿಸಲು ಅವಕಾಶ ನೀಡಲಾಗಿತ್ತು. ಆ ಪ್ರಕಾರ ವಿವಿಧ ಯೋಜನೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ತಾವು ನಿಭಾಯಿಸುತ್ತಿರುವ ಯೋಜನೆಯ ಜವಾಬ್ದಾರಿಗಳು ಹಾಗೂ ಅದರಲ್ಲಿನ ಸವಾಲುಗಳು ಏನಿವೆ? ಸವಾಲುಗಳನ್ನು ಹೇಗೆ ನಿಭಾಯಿಸಿದ್ದೇವೆ? ಎಂಬುದರ ಕುರಿತಾಗಿ ಸಂಕ್ಷಿಪ್ತವಾಗಿ ವಿಷಯ ಮಂಡನೆ ಮಾಡಿದರು. ಈ ಕಾರ್ಯಾಗಾರದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮನುಷ್ಯನ ವಿಕಸನಕ್ಕೆ<br>ನುರಿತ ಸಿಬ್ಬಂದಿಗಳ ಮೂಲಕ<br>ವಿವಿಧ ಯೋಜನೆಗಳನ್ನು ರೂಪಿಸಿ<br>ಕಾರ್ಯಗತಗೊಳಿಸಿ<br>ಸಮಾಜವನ್ನು ವಿಕಸಿಸುತ್ತಿರುವ

**ಮನುವಿಕಾಸ**

# ಮನುವಿಕಾಸ ಸಂಸ್ಥೆಯ ವತಿಯಿಂದ ಸಿದ್ದಾಪುರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ




ಮನುವಿಕಾಸ ಸಂಸ್ಥೆ, ಪ್ರಗತಿಮಿತ್ರ ಟ್ರಸ್ಟ್, ಐ.ಎಂ.ಎ ಶಿರಸಿ ಮತ್ತು ಸಿದ್ದಾಪುರ, ಐ.ಎಂ.ಎ ಶಿರಸಿ ಸೇವಾ ಪ್ರತಿಷ್ಠಾನ, ಲಯನ್ಸ್ ಕ್ಲಬ್ ಶಿರಸಿ ಮತ್ತು ಸಿದ್ದಾಪುರ, ಎಸ್.ಡಿ.ಎಂ ನಾರಾಯಣ ಹಾರ್ಟ್ ಸೆಂಟರ್ ಧಾರವಾಡ, ಶ್ರೀ ಸಿದ್ಧಿವಿನಾಯಕ ಆಂಗ್ಲ ಮಾಧ್ಯಮ ಪ್ರೌಢಶಾಲೆ ಸಿದ್ದಾಪುರ, ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಮಾನಿ ಬಳಗ ಸಿದ್ದಾಪುರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸಿದ್ದಾಪುರದ ಶ್ರೀ ಸಿದ್ಧಿವಿನಾಯಕ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಒಂದು ದಿನದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಿತ್ತು. ಆರೋಗ್ಯ ತಪಾಸಣಾ ಶಿಬಿರವನ್ನು ಶಿಕ್ಷಣ ಪ್ರಸಾರಕ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ ಹೆಗಡೆ ಉದ್ಘಾಟಿಸಿ ಮಾತನಾಡಿ, ಆರೋಗ್ಯ ಕ್ಷೇತ್ರದಲ್ಲಿ ಸಮಗ್ರ ಆರೋಗ್ಯ ನಿರ್ವಹಣೆ ಎನ್ನುವ ಪರಿಕಲ್ಪನೆ ಮೂಡುವಂತಾಗಬೇಕು. ಮನುವಿಕಾಸದಂತಹ ಸಂಸ್ಥೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಸಂಘಟಿಸುವ ಮೂಲಕ ಬಡ ಮತ್ತು ಮಧ್ಯಮ ವರ್ಗದವರಿಗೆ ತಜ್ಞ ವೈದ್ಯರುಗಳನ್ನು ಸಂಪರ್ಕಿಸಿಕೊಡುವಲ್ಲಿ ಮುಖ್ಯ ಪಾತ್ರವನ್ನು ವಹಿಸಿದೆ ಎಂದು ಹೇಳಿದರು.



ಆರೋಗ್ಯ ತಪಾಸಣಾ ಶಿಬಿರದಲ್ಲಿ ತಜ್ಞ ವೈದ್ಯರಾದ ಡಾ. ಎಲ್. ಧರ್ಮಶಾಲಾ, ಡಾ.ವಿಜಯ್‌ಕುಮಾರ್, ಡಾ. ರಾಮಾ ಹೆಗಡೆ, ಡಾ. ಗೌತಮ ಶೇಟ್, ಡಾ. ಆಶಾ ಆನಂದ, ಡಾ. ಸುಫಲಾ, ಡಾ.ಎಸ್. ಎಂ.ಹೆಗಡೆ, ಡಾ. ರಾಜು, ಡಾ.ನಾಗೇಶ್, ಡಾ. ಸ್ವಾತಿ ವಿನಾಯಕ, ಡಾ.ಜಿ.ಎಂ.ಹೆಗಡೆ, ಡಾ.ರಾಘವೇಂದ್ರ ಭಟ್ಟ, ಡಾ. ಎನ್.ಆರ್. ಹೆಗಡೆ, ಡಾ. ಪೃಥ್ವಿಚಂದ್ರ , ಡಾ. ಝುಹೀರ ಅಹ್ಮದ್, ಡಾ. ರವಿಕಿರಣ ಪಟವರ್ಧನ್, ಡಾ. ಮಹಾಂತೇಶ, ಡಾ. ಅನಿಲ್ ಎಸ್. ಡಾ. ಪ್ರಕಾಶ ಪುರಾಣಿಕ್, ಡಾ. ಮಹೇಶ್ ಹೆಗಡೆ ಮೊದಲಾದ ವಿವಿಧ ವಿಭಾಗದ ವಿಶೇಷ ತಜ್ಞ ವೈದ್ಯರು ಹಾಜರಿದ್ದರು. ಶಿರಸಿಯ ಲಯನ್ಸ್ ಉಪಾಧ್ಯಕ್ಷರಾದ ಶ್ರೀ ಅಶ್ವತ್ಥ್ ಹೆಗಡೆ, ಸಮಾಜ ಸೇವಕರಾದ ಶ್ರೀ ಉಪೇಂದ್ರ ಪೈ, ಸಿದ್ದಾಪುರ ಲಯನ್ಸ್‌ಕ್ಲಬ್ ಅಧ್ಯಕ್ಷರಾದ ಆರ್. ಎಂ.ಪಾಟೀಲ್, ಕಾಗೇರಿ ಅಭಿಮಾನಿ ಬಳಗದವರು ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. 500 ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣಾ ಶಿಬಿರದಲ್ಲಿ ತಪಾಸಣೆಗೆ ಒಳಗಾಗಿ ಸಲಹೆ ಪಡೆದರು.

# ಮನುವಿಕಾಸದಿಂದ ಹೈನುಗಾರಿಕೆ ತರಬೇತಿ



ಮನುವಿಕಾಸ ಸಂಸ್ಥೆ ಮತ್ತು ಈಡೆಲ್‌ಗೀವ್ ಫೌಂಡೇಶನ್ ಹಾಗೂ ದಲ್ಯಾನ್ ಫೌಂಡೇಶನ್ ಸಹಯೋಗದೊಂದಿಗೆ ದಿನಾಂಕ 09-11-2022 ರಂದು ಕಲಘಟಗಿ ತಾಲೂಕಿನ ತಂಬೂರು ಗ್ರಾಮದ ಸಭಾಭವನದಲ್ಲಿ ಹೈನುಗಾರಿಕಾ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಕಲಘಟಗಿ ತಾಲೂಕಾ ಆಸ್ಪತ್ರೆಯ ಪಶುವೈದ್ಯರಾದ ಡಾ.ದೇವೇಂದ್ರ ಲಮಾಣಿ ಮಾತನಾಡಿ "ಇತ್ತೀಚಿನ ದಿನಗಳಲ್ಲಿ ಹೈನುಗಾರಿಕೆ ಉದ್ಯಮವು ಕೂಡ ಅತ್ಯಂತ ಲಾಭದಾಯಕ ಕ್ಷೇತ್ರವಾಗಿದ್ದು, ಸಮಗ್ರ ಜಾನುವಾರು ನಿರ್ವಹಣೆಯಿಂದ ಮಾತ್ರ ತ್ವರಿತ ಗತಿಯಲ್ಲಿ ಲಾಭಗಳಿಸಲು ಸಾಧ್ಯ. ಜಾನುವಾರುಗಳ ಪಾಲನೆ ಮತ್ತು ಪೋಷಣೆಯನ್ನು ಅತ್ಯಂತ ಮುತುವರ್ಜಿಯಿಂದ ಮಾಡಿದಾಗ ಮಾತ್ರ ಪರಿಣಾಮಕಾರಿ ಹೈನುಗಾರಿಕೆ ಸಾಧ್ಯ. ಸೂಕ್ತ ಸಮಯದಲ್ಲಿ ಜಾನುವಾರುಗಳ ರೋಗ ಲಕ್ಷಣ ಪತ್ತೆ ಹಚ್ಚಿ ಔಷಧೋಪಚಾರ ಮಾಡಿ ಜಾನುವಾರುಗಳನ್ನು ನಿರ್ವಹಣೆ ಮಾಡಬೇಕು. ಹಸಿ ಮತ್ತು ಒಣ ಮೇವುಗಳನ್ನು ಸಮ ಪ್ರಮಾಣದಲ್ಲಿ ಒದಗಿಸಿದರೆ ರಾಸುಗಳು ಉತ್ತಮ ಸ್ಥಿತಿಯ ಜೊತೆಗೆ ಅಧಿಕ ಹಾಲನ್ನು ನೀಡಿ ಹೆಚ್ಚಿನ ಲಾಭವನ್ನು ತಂದುಕೊಡುತ್ತವೆ. ಜಾನುವಾರುಗಳಲ್ಲಿ ಗಂಟಲು ರೋಗ, ಕಾಲುಬಾಯಿ ರೋಗ, ಅಂತ್ರಾಕ್ಸ್, ಮೊದಲಾದ ರೋಗಗಳ ಲಕ್ಷಣ ಕಾಣಿಸಿಕೊಂಡ ತಕ್ಷಣ ಸ್ಥಳೀಯ ವೈದ್ಯಾಧಿಕಾರಿಗಳಿಂದ ಲಸಿಕೆ ಹಾಕಿಸುವುದು ಕೂಡ ಮುಖ್ಯವಾಗುತ್ತದೆ" ಎಂದು ಹೇಳಿದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ದುಮ್ಮವಾಡದ ಮುಖ್ಯ ಪಶುವೈದ್ಯಾಧಿಕಾರಿಗಳಾದ ಶ್ರೀ ಮಂಜುನಾಥ ಕುರಗುಂದರವರು ಮಾತನಾಡಿ "ಹೈನುಗಾರಿಕೆಯಲ್ಲಿ ಪ್ರಮುಖವಾಗಿ ಜರ್ಸಿ, ಹೆಚ್. ಎಫ್, ತಳಿಯ ಜಾನುವಾರುಗಳಿಂದ ಹಾಲಿನ ಉತ್ಪಾದನೆ ಜಾಸ್ತಿ ಬರುವುದಾಗಿ ತಿಳಿಸಿದರು. ಒಣ ಮೇವು ಸಂತುಲಿತ ಪ್ರಮಾಣದಲ್ಲಿ ಕೊಟ್ಟಾಗ ಹಾಲಿನ ಉತ್ಪಾದನೆ ಜಾಸ್ತಿಯಾಗಿ ಸಂಘದ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗುತ್ತದೆ. ಜಾನುವಾರುಗಳ ಗರ್ಭಧಾರಣೆಯ ಸಮಯದಲ್ಲಿ ಮತ್ತು ನಂತರ ನಿರ್ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ವಿವರಿಸಿದರು". ಕಾರ್ಯಕ್ರಮದಲ್ಲಿ 45ಕ್ಕೂ ಹೆಚ್ಚು ಮಹಿಳೆಯರು ಹೈನುಗಾರಿಕೆಯ ಬಗೆಗಿನ ತಮ್ಮ ಗೊಂದಲಗಳನ್ನು ಕೇಳಿ ಬಗೆಹರಿಸಿಕೊಂಡರು. ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀ ಬಸವರಾಜ ರಡ್ಡೇರ್, ಶ್ರೀ ಸಂಜಯ ಲಮಾಣಿ, ಶ್ರೀ ಶ್ರೀಕಾಂತ ಹೆಗಡೆ, ಶ್ರೀ ನಿರಂಜನ ಕದಂ ಸೇರಿದಂತೆ ಗ್ರಾಮ ಪಂಚಾಯತ್ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಮನುವಿಕಾಸ ಸಂಸ್ಥೆಯ ವತಿಯಿಂದ ನರೇಗಾ ಯೋಜನೆಯ ಜಾಗೃತಿಯ ಕಾಯಕ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯ ಅಡಿಯಲ್ಲಿ ಹಳಿಯಾಳ, ಮುಂಡಗೋಡ, ಕಲಘಟಗಿ, ಹಾನಗಲ್ ದಾಂಡೇಲಿ ಮೊದಲಾದ ತಾಲೂಕುಗಳಲ್ಲಿ ಕಾರ್ಮಿಕರಿಗೆ ಉದ್ಯೋಗ ಖಾತರಿ ಯೋಜನೆಯ ಕುರಿತಾಗಿ ಮಾಹಿತಿ ನೀಡಿ ಜಾಗೃತಿ ಮೂಡಿಸಲಾಗುತ್ತಿದೆ. ವಿವಿಧ ಕ್ರಿಯಾ ಯೋಜನೆಗಳ ಅಡಿಯಲ್ಲಿ ಕಾರ್ಮಿಕರಿಗೆ ಕೆಲಸ ಕೊಡಿಸುವ ಕಾರ್ಯವನ್ನೂ ಸಹ ಮನುವಿಕಾಸ ಸಂಸ್ಥೆ ಮಾಡುತ್ತಿದೆ.



# ಕರ್ಜಗಿ ಕಲಿಕಾ ಕೇಂದ್ರಕ್ಕೆ ನಬಾರ್ಡ ಅಧಿಕಾರಿಗಳ ಭೇಟಿ




ನಬಾರ್ಡ (NABARD) ಬೆಂಗಳೂರು ಹಾಗೂ ಬರ್ಡ್(BIRD) ಮಂಗಳೂರು ಇವರ ಸಹಯೋಗದಲ್ಲಿ ದಿನಾಂಕ 5-9-2022 ರಿಂದ 7-9-2022 ರವರೆಗೆ ಮಂಗಳೂರಿನ ಬರ್ಡ್ ತರಬೇತಿ ಕೇಂದ್ರದಲ್ಲಿ ಸ್ವಯಂ ಸೇವಾ ಸಂಸ್ಥೆ, ಬ್ಯಾಂಕ್, ಸಾರ್ವಜನಿಕ ರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಸಂಸ್ಥೆಗಳ ಸಿಬ್ಬಂದಿಗಳಿಗೆ ಮೂರು ದಿನದ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀಮತಿ ಗೀತಾ ಪಂಡಿತ್, ಶ್ರೀ ಗುರುದಾಸ್ ಪ್ರಭು, ಕುಮಾರಿ ಮಾಧುರಿ ಪಟಗಾರ್ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ದಿನಾಂಕ 22-9-2022 ರಿಂದ 24-9-2022 ರವರೆಗೆ ಶಿರಸಿಯ ಸುಪ್ರಿಯಾ ಇಂಟರ್‌ನ್ಯಾಷನಲ್ ಹೊಟೆಲ್‌ನಲ್ಲಿ "ಗ್ರೀನ್ ಫೈನಾನ್ಸ್" ವಿಷಯದ ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಮನುವಿಕಾಸ ಸಂಸ್ಥೆಯ ಕಲಿಕಾ ಕೇಂದ್ರ, ಕರ್ಜಗಿಗೆ ಕಾರ್ಯಾಗಾರದ ವತಿಯಿಂದ ಕ್ಷೇತ್ರ ಭೇಟಿಯನ್ನು ಆಯೋಜಿಸಲಾಗಿತ್ತು. ಕಲಿಕಾ ಕೇಂದ್ರವನ್ನು ವೀಕ್ಷಿಸಿ ನಬಾರ್ಡ ಸಂಸ್ಥೆಯ ಜಂಟಿ ನಿರ್ದೇಶಕರಾದ ಶ್ರೀ ಕೆ. ಪ್ರವೀಣ್ ರಾಜ್ ಉಡುಪ ಮಾತನಾಡಿ, "ಸಾಮಾಜಿಕ ಕ್ಷೇತ್ರಕ್ಕೆ ಮನುವಿಕಾಸ ಸಂಸ್ಥೆಯ ಕೊಡುಗೆ ಅಪಾರವಾದುದ್ದು ಎಂದರು. ಮಹಿಳಾ ಸಬಲೀಕರಣ, ಪರಿಸರ ಅಭಿವೃದ್ಧಿ, ಕೆರೆ ಪುನರುಜ್ಜೀವನ ಕಾರ್ಯ ನಿಜಕ್ಕೂ ಶ್ಲಾಘನೀಯ" ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ನಬಾರ್ಡ್ ಸಂಸ್ಥೆಯ ಕಾರ್ಯಕ್ರಮ ಸಂಯೋಜಕರಾದ ಶ್ರೀ ಎಲ್. ಸಂಜೀವಿ, ಶ್ರೀ ಆರ್. ಗಣಪತಿ ಹಾಗೂ ಕಾರ್ಯಾಗಾರಕ್ಕೆ ಆಗಮಿಸಿದ್ದ ವಿವಿಧ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಈ ಕಾರ್ಯಾಗಾರದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಕುಮಾರಿ ಶಿಲ್ಪಾ ಶಾಸ್ತ್ರಿ, ಶ್ರೀಕಾಂತ್ ಹೆಗಡೆ, ಪವನ್ ಬೊಮ್ಮನಳ್ಳಿ ಪಾಲ್ಗೊಂಡಿದ್ದರು.

# ಮನುವಿಕಾಸ ಸಂಸ್ಥೆಯಿಂದ ಸಮುದಾಯದ ಆಸ್ತಿ ಸಂರಕ್ಷಣೆಗೆ ಸಮಿತಿ ರಚನೆ




ಸಾಮೂಹಿಕ ಆಸ್ತಿಗಳಾದ ಸರ್ಕಾರಿ ಬೆಟ್ಟ, ಗೋಮಾಳ, ಗುಡ್ಡ, ಸ್ಮಶಾನ ಇವುಗಳ ಸಂರಕ್ಷಣೆಗೆಂದು ಮನುವಿಕಾಸ ಸಂಸ್ಥೆಯು ಫೌಂಡೇಶನ್ ಫಾರ್ ಎಕಾಲಾಜಿಕಲ್ ಸೆಕ್ಯೂರಿಟಿ (ಎಫ್.ಈ.ಎಸ್) ಎಂಬ ಸಂಸ್ಥೆಯ ಸಹಯೋಗದೊಂದಿಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ತಾಲೂಕಿನ ಆಯ್ದ 16 ಗ್ರಾಮ ಪಂಚಾಯತ್ ವ್ಯಾಪ್ತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸಮುದಾಯದ ಆಸ್ತಿಗಳನ್ನು ಗುರುತಿಸುವುದು ಹಾಗೂ ನಕ್ಷೀಕರಣ ಕಾರ್ಯವನ್ನು ಮಾಡುತ್ತಿದೆ. ಮುಂಗಾರು ಪೂರ್ವ ಹಾಗೂ ಮುಂಗಾರಿನ ನಂತರ ಶಿರಸಿ ಮತ್ತು ಸಿದ್ದಾಪುರ ತಾಲೂಕಿನ 60 ಗ್ರಾಮಗಳ 163 ಬಾವಿಗಳನ್ನು ಆಯ್ಕೆ ಮಾಡಿಕೊಂಡು ಬಾವಿಯಲ್ಲಿನ ಅಂತರ್ಜಲ ಮಟ್ಟವನ್ನು ಪರೀಕ್ಷಿಸಿ ಅಂತರ್ಜಲ ಮಟ್ಟದಲ್ಲಿ ಉಂಟಾದಂತಹ ವ್ಯತ್ಯಾಸವನ್ನು ರೈತರಿಗೆ ತಿಳಿಸಿ, ನೀರಿನ ಸಂರಕ್ಷಣೆ ಕುರಿತು ಅರಿವು ಮೂಡಿಸಲಾಗಿದೆ. ಸಾಮುದಾಯಿಕ ಆಸ್ತಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಕ್ಲಾರ್ಟ್ ಎಂಬ ವಿಶೇಷ ಆ್ಯಪ್ ಮೂಲಕ 60 ಗ್ರಾಮಗಳಿಗೆ ಸಂಬಂಧಪಟ್ಟ ಸರಿಸುಮಾರು 963 ಕೆಲಸದ ಕಾಮಗಾರಿಗಳನ್ನು ಗುರುತಿಸಿ ಸಂಬಂಧಪಟ್ಟ ಆಯಾ ಗ್ರಾಮ ಪಂಚಾಯತಿಗಳಿಗೆ ಸಲ್ಲಿಕೆ ಮಾಡಲಾಗಿದೆ, ಈ ಕುರಿತು ರೈತರಲ್ಲಿ ಜಾಗೃತಿ ಕಾರ್ಯವನ್ನು ಸಹ ಮಾಡಲಾಗಿದೆ.

12,000 ಹೆಕ್ಟೇರ್ ಸಾಮುದಾಯಿಕ ಆಸ್ತಿಯನ್ನು ಗುರುತಿಸಿ ನಕ್ಷೀಕರಣಗೊಳಿಸಿ ಪಂಚಾಯತ್ ರಾಜ್ ಆಕ್ಟ್ 2006 ಅಡಿಯಲ್ಲಿನ ನಮೂನೆ 30 & 31 ನಿಯಮ 69ರ ಅಡಿಯಲ್ಲಿ ಲಭ್ಯತೆ ಹಾಗೂ ಬಳಕೆ ಬಗ್ಗೆ ಸವಿಸ್ತಾರವಾಗಿ ದಾಖಲಿಸಲಾಗಿದೆ. ಒಟ್ಟಾರೆಯಾಗಿ ರೈತರಿಗೆ ಬೆಟ್ಟಗಳ ಬಳಕೆ ಹಾಗೂ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ.

# ಮನುವಿಕಾಸದಿಂದ ದಾನ್ ಉತ್ಸವ್ ಆಚರಣೆ

# ವಿದ್ಯಾರ್ಥಿಗಳಿಗೆ ದಾನದ ಮಹತ್ವ ಸಾರಿದ ಕಾರ್ಯಕ್ರಮ




ಭೂಮಿ ಫೌಂಡೇಶನ್ ವತಿಯಿಂದ ದೇಶದೆಲ್ಲೆಡೆ ದಾನದ ಮಹತ್ವ ಸಾರಲು ಅಕ್ಟೋಬರ್ 2 ರಿಂದ 8 ರವರೆಗೆ ದಾನ್ ಉತ್ಸವ್ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮನುವಿಕಾಸ ಹಾಗೂ ಭೂಮಿ ಫೌಂಡೇಶನ್ ಸಹಯೋಗದಲ್ಲಿ ದಿನಾಂಕ 28/09/2022 ರಂದು ಸಿದ್ದಾಪುರ ತಾಲೂಕು ಕಾನಸೂರಿನ ಶ್ರೀ ಕಾಳಿಕಾ ಭವಾನಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ದಾನದ ಶ್ರೇಷ್ಠತೆ ಹಾಗೂ ದಾನದ ಮಹತ್ವ ತಿಳಿಸಲು "ದಾನ್ ಉತ್ಸವ್"ದ ಅಡಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮುಖ್ಯಾಧ್ಯಾಪಕರಾದ ಶ್ರೀಮತಿ ಮೀನಾ ಬೋರಕರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮನುವಿಕಾಸ ಸಂಸ್ಥೆಯು ಹತ್ತಾರು ವರ್ಷಗಳಿಂದ ನೆಲ, ಜಲ, ಪರಿಸರ, ಶಿಕ್ಷಣದ ಕ್ಷೇತ್ರದಲ್ಲಿ ಸಮಾಜಮುಖಿ ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ. ವಿದ್ಯಾರ್ಥಿಗಳು ತಾವು ಓದಿದ ಬಳಸಿದ ಪುಸ್ತಕಗಳನ್ನು ತಮ್ಮ ಕಿರಿಯ ವಿದ್ಯಾರ್ಥಿಗಳಿಗೆ ನೀಡಿ ದಾನದ ಮನೋಭಾವವನ್ನು ರೂಢಿಸಿಕೊಳ್ಳಬೇಕು ಎಂದು ಕಿವಿ ಮಾತನ್ನು ಹೇಳಿದರು.

ಮನುವಿಕಾಸ ಸಂಸ್ಥೆಯ ಸಿಬ್ಬಂದಿಯಾದ ಸೂರ್ಯ ಗುಂಡು ಅವರು ಮಾತನಾಡಿ ನಮ್ಮಲ್ಲಿನ ಪಠ್ಯ–ಪುಸ್ತಕ ಅಥವಾ ಹೆಚ್ಚುವರಿ ವಸ್ತುಗಳನ್ನು ಅವಶ್ಯಕತೆ ಇರುವವರಿಗೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ದಾನ ಮಾಡುವ ಮನೋಭಾವನೆಯನ್ನು ಬೆಳೆಸಿಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು. ಕಾನಸೂರಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮತ್ತು ಅಂಗನವಾಡಿ ಮಕ್ಕಳಿಗೆ ವಿವಿಧ ಚಟುವಟಿಕೆಗಳನ್ನು ನೀಡಿ ದಾನದ ಮಹತ್ವವನ್ನು ತಿಳಿಸಲಾಯಿತು. ದಾನ್ ಉತ್ಸವ್ ಕಾರ್ಯಕ್ರಮದ ಮತ್ತೊಂದು ಭಾಗವಾಗಿ ದಿನಾಂಕ 08/10/2022 ರಂದು ಸ್ವಚ್ಛತಾ ಕಾರ್ಯವನ್ನು ಸಹ ಹಮ್ಮಿಕೊಳ್ಳಲಾಗಿತ್ತು. ಮನುವಿಕಾಸ ಸಂಸ್ಥೆಯ ಶಿರಸಿಯ ಮುಖ್ಯ ಕಛೇರಿ ವಿಜಯನಗರದಲ್ಲಿನ ರಸ್ತೆಗಳ ಇಕ್ಕೆಲಗಳಲ್ಲಿ ತುಂಬಿದ್ದ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಿ, ನಗರಸಭೆಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ನೀಡಲಾಯಿತು. ಈ ಸ್ವಚ್ಛತಾ ಕಾರ್ಯದಲ್ಲಿ ಮನುವಿಕಾಸ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು.



## ಕೆರೆ ಹೂಳೆತ್ತುವ ಕುರಿತು ರೈತರೊಂದಿಗೆ ಪೂರ್ವಭಾವಿ ಸಭೆ ಆಯೋಜನೆ






ಮನುವಿಕಾಸ ಸಂಸ್ಥೆಯು ಕಳೆದ 19 ವರ್ಷಗಳಿಂದ ನೆಲ, ಜಲ, ಪರಿಸರ ಸಂರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಉತ್ತರ ಕನ್ನಡ, ಶಿವಮೊಗ್ಗ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿನ ಶಿರಸಿ, ಮುಂಡಗೋಡ, ಸೊರಬ, ಹಾನಗಲ್ ಹಾಗೂ ಕಲಘಟಗಿ ತಾಲೂಕುಗಳಲ್ಲಿ 180 ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದೆ. ಮನುವಿಕಾಸ ಸಂಸ್ಥೆಯ ಜನಪ್ರಿಯ ಯೋಜನೆಯಲ್ಲಿ ಒಂದಾದ "ಕೆರೆಗಳ ಪುನರುಜ್ಜೀವನ" ಕಾರ್ಯಕ್ರಮದ ಅಡಿಯಲ್ಲಿ 2022–23ನೇ ಸಾಲಿನಲ್ಲಿ ಉಚಿತವಾಗಿ ಹೂಳೆತ್ತಿ ಅಭಿವೃದ್ಧಿಪಡಿಸಬಹುದಾದ ಕೆರೆಗಳ ಕುರಿತು ರೈತರೊಂದಿಗೆ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗುತ್ತಿದ್ದು, ರೈತರಿಗೆ ನೀರಿನ ಸಂರಕ್ಷಣೆ ಹಾಗೂ ಕೆರೆಗಳ ಮಹತ್ವಗಳ ಕುರಿತು ಮಾಹಿತಿಯನ್ನು ನೀಡಿ ಸಭೆಯನ್ನು ನಡೆಸಲಾಗುತ್ತಿದೆ. ಈಗಾಗಲೇ ಹಾನಗಲ್, ಸೊರಬ, ಬ್ಯಾಡಗಿ, ಕಲಘಟಗಿ ತಾಲೂಕುಗಳಲ್ಲಿ ಕೆರೆಗಳನ್ನು ಗುರುತಿಸಿ, ರೈತರು ಹಾಗೂ ಗ್ರಾಮ ಪಂಚಾಯತ್ ಅಧಿಕಾರಿಗಳು, ಸದಸ್ಯರೊಂದಿಗೆ ಚರ್ಚಿಸಲಾಗುತ್ತಿದೆ. ಈ ಬಾರಿ ಹುಬ್ಬಳ್ಳಿ, ಅಳ್ನಾವರ, ಕುಂದಗೋಳ, ಶಿಕಾರಿಪುರ, ಶಿಗ್ಗಾಂವಿ, ಬ್ಯಾಡಗಿ ಹಾಗೂ ಹಿರೇಕೆರೂರ ತಾಲೂಕುಗಳನ್ನು ಕೆರೆ ಪುನರುಜ್ಜೀವನ ಯೋಜನೆಗೆ ಹೊಸದಾಗಿ ಸೇರ್ಪಡೆ ಮಾಡಿಕೊಳ್ಳಲಾಗಿದ್ದು, ರೈತರ ಹಾಗೂ ಸ್ಥಳೀಯ ಪ್ರತಿನಿಧಿಗಳ ಸಹಕಾರದೊಂದಿಗೆ ಉಚಿತವಾಗಿ ಕೆರೆ ಹೂಳೆತ್ತಿ ಅಭಿವೃದ್ಧಿಪಡಿಸುವ ಅಭಿಲಾಷೆಯನ್ನು ಮನುವಿಕಾಸ ಸಂಸ್ಥೆಯು ಹೊಂದಿದೆ.

## ಸ್ವ ಸಹಾಯ ಸಂಘಗಳಿಗೆ ಪರಿಕಲ್ಪನಾ ತರಬೇತಿ ಆಯೋಜನೆ

ಮನುವಿಕಾಸ ಸಂಸ್ಥೆ ಹಾಗೂ ಈಡಲ್‌ಗೀವ್ ಫೌಂಡೇಶನ್ ಮತ್ತು ದಲ್ಯಾನ್ ಫೌಂಡೇಶನ್ ಸಹಯೋಗದಲ್ಲಿ ಸಿದ್ದಾಪುರ ತಾಲೂಕಿನ ಬಾಲಭವನದಲ್ಲಿ ದಿನಾಂಕ 28/9/2022 ರಂದು ಮನುವಿಕಾಸ ಸಂಸ್ಥೆಯ ವತಿಯಿಂದ ಹೊಸದಾಗಿ ರಚನೆಗೊಂಡ ಸ್ವ ಸಹಾಯ ಸಂಘಗಳ ಮಹಿಳೆಯ–




ರಿಗೆ ಪರಿಕಲ್ಪನಾ ತರಬೇತಿಯನ್ನು ಆಯೋಜಿಸಲಾಗಿತ್ತು. ಮನುವಿಕಾಸ ಸಂಸ್ಥೆಯ ಕಾರ್ಯಚಟುವಟಿಕೆಯ ಮುಖ್ಯಸ್ಥರಾದ (ಆಪರೇಶನ್ ಹೆಡ್) ಶ್ರೀಮತಿ ಗೀತಾ ಪಂಡಿತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸ್ವ ಸಹಾಯ ಸಂಘದ ರಚನೆಯು ಮಹಿಳಾ ಸಬಲೀಕರಣದ ಮೊದಲ ಹೆಜ್ಜೆಯಾಗಿದೆ. ನಮ್ಮನ್ನು ನಾವು ಸಮಾಜದಲ್ಲಿ ಗುರುತಿಸಿಕೊಳ್ಳಲು ಸ್ವ ಸಹಾಯ ಸಂಘವು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದು, ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಮಾತಿನಂತೆ ಸಂಘದಲ್ಲಿನ ಎಲ್ಲಾ ಸದಸ್ಯರು ಪಾಲ್ಗೊಂಡು ತಿಂಡಿ–ತಿನಿಸುಗಳು, ಕರಕುಶಲ ವಸ್ತುಗಳು, ನರ್ಸರಿ (ಸಸ್ಯ ಪಾಲನೆ) ಈ ಮೊದಲಾದವುಗಳನ್ನು ಆರಂಭಿಸಿ ಉತ್ತಮ ಆದಾಯ ಗಳಿಸಲು ಮತ್ತು ಸ್ವ ಉದ್ಯೋಗಿಗಳಾಗಲು ಅವಕಾಶವಿದೆ ಎಂದರು. ಬ್ಯಾಂಕ್‌ಗಳು ಸ್ವ ಸಹಾಯ ಸಂಘದಲ್ಲಿನ ಮಹಿಳೆಯರಿಗೆ ಸ್ವ ಉದ್ಯೋಗಿಯಾಗಲು ಸಾಲ ಸೌಲಭ್ಯವನ್ನು ಸಹ ಒದಗಿಸಿಕೊಟ್ಟಿದೆ ನೀವು ಇದರ ಸದುಪಯೋಗ ಪಡೆದುಕೊಳ್ಳಬೇಕಿದೆ ಎಂದು ಹೇಳಿದರು. ಪ್ರಗತಿಮಿತ್ರ ಸೌಹಾರ್ದ ಸಹಕಾರಿ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾದ ಶ್ರೀ ವಿನಯ್ ನಾಯ್ಕ ಮಾತನಾಡಿ ಪ್ರಗತಿಮಿತ್ರ ಬ್ಯಾಂಕ್ ಕಳೆದ ಆರು ವರ್ಷಗಳಿಂದ ಸ್ವ ಸಹಾಯ ಸಂಘಗಳ ಉಳಿತಾಯ ಖಾತೆ ತೆರೆಯಲು ಅನುಕೂಲ ಮಾಡಿಕೊಡುತ್ತಿದ್ದು ಸಾಲ ಸೌಲಭ್ಯಗಳನ್ನು ಸಹ ನೀಡುತ್ತಾ ಬಂದಿದೆ. ಪ್ರಗತಿ ಮಿತ್ರ ಬ್ಯಾಂಕ್‌ನ ಸಹಕಾರದೊಂದಿಗೆ ಶಿರಸಿ, ಸಿದ್ದಾಪುರ, ಮುಂಡಗೋಡ, ಕಾರವಾರ ತಾಲೂಕುಗಳಲ್ಲಿ ಸ್ವ ಸಹಾಯ ಸಂಘದ ಮಹಿಳೆಯರಿಗೆ ಕಿರಾಣಿ ಅಂಗಡಿ ನಡೆಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ನೀಡಿದ್ದು, ಇದರ ಪ್ರಯೋಜನವನ್ನು ನೀವು ಸಹ ಪಡೆಯಬಹುದು ಎಂದು ಹೇಳಿದರು. ಈ ಕಾರ್ಯಾಗಾರದಲ್ಲಿ 40 ಕ್ಕೂ ಅಧಿಕ ಸ್ವ ಸಹಾಯ ಸಂಘದ ಮಹಿಳೆಯರು ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಮನೀತ್ ನಾಯ್ಕ್, ಸತ್ಯನಾರಾಯಣ ಗೌಡ ಉಪಸ್ಥಿತರಿದ್ದರು.

# ರೈತ ಉತ್ಪಾದಕ ಕಂಪನಿಗಳಿಗೆ ಪರಿಕಲ್ಪನಾ ತರಬೇತಿ ಆಯೋಜನೆ




ಮನುವಿಕಾಸ ಸಂಸ್ಥೆಯ ವತಿಯಿಂದ ದಿನಾಂಕ 18/08/2022 ರಂದು ಕಾರವಾರದ ನಬಾರ್ಡ್ ಕಛೇರಿಯಲ್ಲಿ ಉತ್ತರ ಕನ್ನಡ ಜಿಲ್ಲಾ ಮಹಿಳಾ ಮೀನು ಮಾರಾಟಗಾರರ ಮತ್ತು ಉತ್ಪಾದಕರ ಸಂಘದ ಸದಸ್ಯರಿಗೆ ಒಂದು ದಿನದ ಪರಿಕಲ್ಪನಾ ತರಬೇತಿಯನ್ನು ಆಯೋಜಿಸಲಾಗಿತ್ತು. ನಬಾರ್ಡ್‌ನ ಜಿಲ್ಲಾ ಅಭಿವೃದ್ಧಿ ಪ್ರಬಂಧಕರಾದ ಶ್ರೀ ರೇಜಿಸ್ ಇಮ್ಯಾನ್ಯುವೇಲ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, "ಮಧ್ಯವರ್ತಿಗಳಿಂದ ರೈತರಿಗೆ ಆಗುತ್ತಿರುವ ನಷ್ಟ, ಇದರಿಂದಾಗಿ ರೈತರಿಗೆ ಆಗುತ್ತಿರುವ ಹಾನಿಯ ಕುರಿತಾಗಿ ತಿಳಿಸಿದರು. ರೈತ ಉತ್ಪಾದಕ ಸಂಸ್ಥೆಯ ಸದಸ್ಯರು ಹೊಟೆಲ್ ಉದ್ಯಮಗಳನ್ನು ಆರಂಭಿಸಲು ಅವಕಾಶವಿದ್ದು ಕಾರವಾರದಂತಹ ಪ್ರವಾಸೋದ್ಯಮ ಸ್ಥಳಗಳಲ್ಲಿ ಹೊಟೆಲ್ ಉದ್ಯಮಗಳು ಬಹಳಷ್ಟು ಲಾಭದಾಯಕವಾಗಿದೆ. ಉದ್ಯಮ ಆರಂಭಿಸಲು ಬೇಕಾದಂತಹ ಸಲಕರಣೆಗಳು, ಪಾಲಿಸಬೇಕಾದ ನಿಯಮಗಳು, ಅನುಸರಿಸಬೇಕಾದಂತಹ ಲೆಕ್ಕ ಪತ್ರಗಳು, ಲಾಭ ನಷ್ಟಗಳ ಕುರಿತಾದ ವಿಷಯಗಳನ್ನು ರೈತ ಉತ್ಪಾದಕ ಸದಸ್ಯರೊಂದಿಗೆ ಸುಧೀರ್ಘವಾಗಿ ಚರ್ಚಿಸಿದರು". ಅತಿಥಿಗಳಾಗಿ ಆಗಮಿಸಿದ ನಬಾರ್ಡ್‌ನ ಎಲ್.ಡಿ.ಎಮ್. ಶ್ರೀ ರುದ್ರೇಶ್ ಮಾತನಾಡಿ ಬ್ಯಾಂಕ್‌ನಲ್ಲಿ ಸಾಲವನ್ನು ಪಡೆಯುವಾಗ ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ತಿಳಿಸಿಕೊಟ್ಟರು. ಮನುವಿಕಾಸ ಸಂಸ್ಥೆಯ ಆಡಳಿತ ವಿಭಾಗದ ಸಿಬ್ಬಂದಿಗಳಾದ ಶ್ರೀ ಭಾರ್ಗವ್ ಹೆಗಡೆ ಹಾಗೂ ಕುಮಾರಿ ಮಾಧುರಿ ಪಟಗಾರ ಇವರು ರೈತ ಉತ್ಪಾದಕ ಸಂಸ್ಥೆ ಎಂದರೇನು? ಅದರ ಉದ್ದೇಶ, ಆಡಳಿತ ಮಂಡಳಿ ಸದಸ್ಯರ ಜವಾಬ್ದಾರಿ ಮತ್ತು ಅಧಿಕಾರ, ಶೇರುದಾರರ ಮಹತ್ವ, ಮಾರ್ಕೆಟಿಂಗ್ ಅಭಿವೃದ್ಧಿ, ಉದ್ಯಮದ ಮುಂದಿನ ಕಾರ್ಯ ಯೋಜನೆ, ಮೌಲ್ಯವರ್ಧಿತ ಆಹಾರ ಉತ್ಪನ್ನಗಳು, ಪ್ಯಾಕೇಜಿಂಗ್ ಮತ್ತು ಬ್ರಾಂಡಿಂಗ್ ಮುಂತಾದ ವಿಷಯಗಳ ಕುರಿತು ವಿವರವಾಗಿ ತಿಳಿಸಿ ಹೇಳಿದರು. ಕಾರ್ಯಕ್ರಮಕ್ಕೆ ಆಗಮಿಸಿ ಮಾತನಾಡಿದ ಕೆನರಾ ಬ್ಯಾಂಕ್‌ನ ಡಿವಿಜನಲ್ ಮ್ಯಾನೇಜರ್ ಆದ ಶ್ರೀಮತಿ ಲಕ್ಷ್ಮೀ ರಾಮನಾಥ್ ಮಾತನಾಡಿ ಮಹಿಳಾ ಉದ್ಯಮಶೀಲತೆಗೆ ಬ್ಯಾಂಕ್‌ನಿಂದ ಲಭ್ಯವಿರುವ ಯೋಜನೆಗಳ ಕುರಿತು ತಿಳಿಸಿದರು. ಸದಸ್ಯರು ರೈತ ಉತ್ಪಾದಕ ಕಂಪನಿಯ ಜವಾಬ್ದಾರಿ ಮತ್ತು ಕರ್ತವ್ಯ ಹಾಗೂ ಲಾಭದಾಯಕವಾಗಿ ನಡೆಸಿಕೊಂಡು ಹೋಗಬೇಕಾದರೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿದುಕೊಂಡರು.

ಮನುವಿಕಾಸ ಸಂಸ್ಥೆ ಹಾಗೂ ನಬಾರ್ಡನ ಸಹಯೋಗದಲ್ಲಿ ದಿನಾಂಕ 17/08/2022 ರಂದು ಕಾಸರಕೋಡಿನ ಟೊಂಕಾ ಗ್ರಾಮದಲ್ಲಿ ಕಾಸರಕೋಡು ಮೀನು ಉತ್ಪಾದಕರ ಮತ್ತು ಮತ್ಸ್ಯೋದ್ಯಮ ಸಂಘದ ಸದಸ್ಯರಿಗೆ ಒಂದು ದಿನದ ಪರಿಕಲ್ಪನಾ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ದಿವಾಕರ್ ಅಘನಾಶಿನಿಯವರು ಸಂಘಟನೆ ಎಂದರೇನು ? ಸಂಘಗಳನ್ನು ಯಾವ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು ಎಂಬುದನ್ನು ತಿಳಿಸಿದರು. ಸಂಘದ ಸದಸ್ಯರಿಗೆ ಉತ್ತಮ ಸಂಘಟನೆಯನ್ನು ಹೊಂದಿದಾಗ ಮಾತ್ರ ಯಶಸ್ಸು ಹೊಂದಲು ಸಾಧ್ಯ ಎಂದು ತಿಳಿ ಹೇಳಿದರು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಕಡಲ ಜೀವ ವಿಜ್ಞಾನಿಗಳಾದ ಶ್ರೀ ಪ್ರಕಾಶ್ ಮೇಸ್ತ ಅವರು ಮಾತನಾಡಿ, ಸಮುದ್ರ ನಮಗೆ ಅನೇಕ ರೀತಿಯಲ್ಲಿ ಬದುಕನ್ನು ಕಟ್ಟಿಕೊಳ್ಳಲು



ಸಹಕಾರಿಯಾಗಿದೆ. ಮೀನು, ಸಿಗಡಿ, ಏಡಿ ಇವುಗಳಿಗೆ ಮಾರುಕಟ್ಟೆಯಲ್ಲಿ ಸಾಕಷ್ಟು ಬೇಡಿಕೆಗಳಿದ್ದು ಉತ್ತಮವಾಗಿ ಆಧುನಿಕ ರೀತಿಯಲ್ಲಿ ಸಂಸ್ಕರಿಸಿ, ಪ್ಯಾಕಿಂಗ್ ಮಾಡಿ ಮಾರಾಟ ಮಾಡುವುದರಿಂದ ಉತ್ತಮ ಆದಾಯದ ಜೊತೆಯಲ್ಲಿ ಒಳ್ಳೆಯ ಲಾಭವನ್ನೂ ಸಹ ಪಡೆದುಕೊಳ್ಳಬಹುದಾಗಿದೆ ಎಂದರು. ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀ ಭಾರ್ಗವ್ ಹೆಗಡೆ ಹಾಗೂ ಕುಮಾರಿ ಮಾಧುರಿ ಪಟಗಾರ ಇವರು ರೈತ ಉತ್ಪಾದಕ ಸಂಘ ಎಂದರೇನು, ನಿರ್ವಹಿಸುವ ಕಾರ್ಯಗಳು, ಆಡಳಿತ ಮಂಡಳಿ ಹಾಗೂ ನಿರ್ದೇಶಕರ ಜವಾಬ್ದಾರಿಗಳು, ಸಂಸ್ಥೆಯು ನಿರ್ವಹಿಸಬೇಕಾದ ದಾಖಲಾತಿ ಮತ್ತು ಕಾಗದ ಪತ್ರಗಳ ಕುರಿತು ಮಾಹಿತಿ ನೀಡಿದರು.

ಮನುವಿಕಾಸ ಸಂಸ್ಥೆಯು ಕಳೆದ 19 ವರ್ಷಗಳಿಂದ ಸಾಮಾಜಿಕ ಕ್ಷೇತ್ರದ ವಿವಿಧ ವಲಯದಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಸಂಸ್ಥೆಯ ಮುಖ್ಯ ಧ್ಯೇಯೋದ್ದೇಶಗಳಲ್ಲಿ ಮಹಿಳಾ ಸಬಲೀಕರಣವು ಸಹ ಪ್ರಮುಖವಾಗಿದ್ದು, ಉತ್ತರ ಕನ್ನಡ, ಧಾರವಾಡ, ಶಿವಮೊಗ್ಗ, ಹಾವೇರಿ, ಉಡುಪಿ ಜಿಲ್ಲೆಗಳಲ್ಲಿ ಮಹಿಳಾ ಸ್ವ ಸಹಾಯ ಸಂಘಗಳನ್ನು ಸ್ಥಾಪಿಸಿ ಮಹಿಳೆಯರಿಗೆ ಹೊಲಿಗೆ ತರಬೇತಿ, ಬ್ಯೂಟೀಶಿಯನ್ ತರಬೇತಿ, ಹೈನುಗಾರಿಕಾ ತರಬೇತಿ, ಅಡುಗೆ ತರಬೇತಿ ಈ ಮೊದಲಾದ ತರಬೇತಿಗಳನ್ನು ನೀಡುತ್ತಾ ಬಂದಿದ್ದು, ಮಹಿಳೆಯರು ಸ್ವ ಉದ್ಯೋಗಿಗಳಾಗುವಂತೆ ಪ್ರೋತ್ಸಾಹ ನೀಡುತ್ತಿದೆ. ಇಂದಿನ ದಿನಮಾನದಲ್ಲಿ ಮಹಿಳೆಯರು ಸಹ ಆರ್ಥಿಕ ವಲಯದಲ್ಲಿ ಉದ್ಯಮಗಳನ್ನು ಆರಂಭಿಸಿ ಇತರ ಮಹಿಳೆಯರಿಗೆ ಪ್ರೇರೇಪಣೆಯಾಗಿ ನಿಲ್ಲುತ್ತಿದ್ದಾರೆ. ಇದಕ್ಕೆ ಉತ್ತಮ ನಿದರ್ಶನ ಎಂಬಂತೆ ಮನುವಿಕಾಸ ಸಂಸ್ಥೆಯ ವತಿಯಿಂದ ವಿವಿಧ ತರಬೇತಿಗಳನ್ನು ಪಡೆದಿರುವ ಮಹಿಳೆಯರು ಗ್ರಾಮೀಣ ಭಾಗ ಹಾಗೂ ನಗರ ಪ್ರದೇಶಗಳಲ್ಲಿ ತಮ್ಮದೇ ಆದಂತಹ ಬಟ್ಟೆ ಅಂಗಡಿ, ಬ್ಯೂಟಿ ಪಾರ್ಲರ್, ಹೊಟೆಲ್‌ಗಳನ್ನು ಆರಂಭಿಸುದರೊಂದಿಗೆ ಹೈನುಗಾರಿಕಾ ಕ್ಷೇತ್ರದಲ್ಲೂ ಸಹ ಉತ್ತಮ ಸಾಧನೆ ಮಾಡಿರುವುದು ಗಮನಾರ್ಹವಾದಂತಹ ಸಂಗತಿಯಾಗಿದೆ. ಪುರುಷರಂತೆ ತಾವು ಕೂಡಾ ಸ್ವಾವಲಂಬನೆ ಬದುಕನ್ನು ಕಟ್ಟಿಕೊಳ್ಳಬಹುದು ಎಂಬುದನ್ನು ಮಹಿಳೆಯರು ಸಾಬೀತು ಮಾಡಿದ್ದಾರೆ.

| ಕ್ರಮ ಸಂಖ್ಯೆ | ತರಬೇತಿಯ ಹೆಸರು | ದಿನಾಂಕ | ಸ್ಥಳ | ತಾಲೂಕು | ಒಟ್ಟು ಶಿಬಿರಾರ್ಥಿಗಳು / ಸದಸ್ಯರು |
|---|---|---|---|---|---|
| 1 | ಒಕ್ಕೂಟ ಸಭೆ | 16/8/2022 | ಮುಂಡಗೋಡ | ಮುಂಡಗೋಡ | 55 |
| 2 | ಒಕ್ಕೂಟ ಸಭೆ | 17/8/2022 | ಹನುಮಂತಿ | ಶಿರಸಿ | 31 |
| 3 | ಒಕ್ಕೂಟ ಸಭೆ | 20/8/2022 | ಶಿರಸಿ | ಶಿರಸಿ | 22 |
| 4 | ಒಕ್ಕೂಟ ಸಭೆ | 12/9/2022 | ಮೈನಳ್ಳಿ | ಮುಂಡಗೋಡ | 33 |
| 5 | ಒಕ್ಕೂಟ ಸಭೆ | 14/9/2022 | ಹುನಗುಂದ | ಮುಂಡಗೋಡ | 35 |
| 6 | ಒಕ್ಕೂಟ ಸಭೆ | 17/9/2022 | ಗಿಡಮಾವಿನಕಟ್ಟೆ | ಶಿರಸಿ | 39 |
| 7 | ಒಕ್ಕೂಟ ಸಭೆ | 17/9/2022 | ಅಂಕೋಲಾ | ಅಂಕೋಲಾ | 34 |
| 8 | ಒಕ್ಕೂಟ ಸಭೆ | 20/9/2022 | ಆವರ್ಸಾ | ಅಂಕೋಲಾ | 23 |
| 9 | ಒಕ್ಕೂಟ ಸಭೆ | 20/9/2022 | ಹನುಮಂತಿ | ಶಿರಸಿ | 35 |
| 10 | ಒಕ್ಕೂಟ ಸಭೆ | 24/9/2022 | ಶೇಡಿಕುಳಿ | ಅಂಕೋಲಾ | 26 |
| 11 | ಒಕ್ಕೂಟ ಸಭೆ | 1/10/2022 | ಕಾನಸೂರ್ | ಸಿದ್ದಾಪುರ | 48 |
| 12 | ಒಕ್ಕೂಟ ಸಭೆ | 18/10/2022 | ಶಿರಸಿ | ಶಿರಸಿ | 46 |
| 13 | ಒಕ್ಕೂಟ ಸಭೆ | 18/10/2022 | ಮುಂಡಗೋಡ | ಮುಂಡಗೋಡ | 64 |
| 14 | ಒಕ್ಕೂಟ ಸಭೆ | 19//10/2022 | ಸಿದ್ದಾಪುರ | ಸಿದ್ದಾಪುರ | 37 |
| 15 | ಒಕ್ಕೂಟ ಸಭೆ | 20/10/2022 | ಹನುಮಂತಿ | ಶಿರಸಿ | 33 |
| 16 | ಒಕ್ಕೂಟ ಸಭೆ | 22/10/2022 | ಬಮ್ಮಿಗಟ್ಟಿ | ಕಲಘಟಗಿ | 43 |
| 17 | ಹೊಲಿಗೆ ತರಬೇತಿ | 24/8/2022 | ಸಾತ್ನಳ್ಳಿ | ಹಳಿಯಾಳ | 32 |
| 18 | ಹೊಲಿಗೆ ತರಬೇತಿ | 12/9/2022 | ಬದನಗೋಡ | ಶಿರಸಿ | 31 |
| 19 | ಹೊಲಿಗೆ ತರಬೇತಿ | 8/10/2022 | ಆವರ್ಸಾ | ಅಂಕೋಲಾ | 30 |
| 20 | ಹೊಲಿಗೆ ತರಬೇತಿ | 10/10/2022 | ಕಲಘಟಗಿ | ಕಲಘಟಗಿ | 33 |
| 21 | ಬ್ಯೂಟಿಶಿಯನ್ ತರಬೇತಿ | 2/9/2022 | ಶಿರಾಲಿ | ಭಟ್ಕಳ | 23 |
| 22 | ಬ್ಯೂಟಿಶಿಯನ್ ತರಬೇತಿ | 10/10/2022 | ಕಾರವಾರ | ಕಾರವಾರ | 18 |
| 23 | ಪರಿಕಲ್ಪನಾ ತರಬೇತಿ | 28/9/2022 | ಸಿದ್ದಾಪುರ | ಸಿದ್ದಾಪುರ | 75 |
| 24 | ರೈತ ಉತ್ಪಾದಕ ಸಂಘದ ಪರಿಕಲ್ಪನಾ ತರಬೇತಿ | 6/8/2022 | ಕಾಸರಕೋಡ | ಹೊನ್ನಾವರ | 44 |
| 25 | ರೈತ ಉತ್ಪಾದಕ ಸಂಘದ ಪರಿಕಲ್ಪನಾ ತರಬೇತಿ | 17/8/2022 | ಕಾಸರಕೋಡ | ಹೊನ್ನಾವರ | 39 |
| 26 | ರೈತ ಉತ್ಪಾದಕ ಸಂಘದ ಪರಿಕಲ್ಪನಾ ತರಬೇತಿ | 18/8/2022 | ಕಾರವಾರ | ಕಾರವಾರ | 29 |

* ಹೊಲಿಗೆ ತರಬೇತಿ ಮತ್ತು ಬ್ಯೂಟೀಶಿಯನ್ ತರಬೇತಿಗಳು 60 ದಿನಗಳದ್ದಾಗಿರುತ್ತದೆ.


Project WEDA
EdelGive
ಮನುವಿಕಾಸ ಸಂಸ್ಥೆ, ಇಡಲ್‌ಗಿವ್ ಫೌಂಡೇಶನ್
ಮತ್ತು
ದಲ್ಯಾನ್ ಫೌಂಡೇಶನ್
Project WEDA

# ಆಪರೇಶನಲ್ ಪ್ರೊಸೆಸ್ ಮ್ಯಾನ್ಯುವಲ್ ಪ್ರಿಪರೇಶನ್ ವಿಷಯದ ಕುರಿತು ಮನುವಿಕಾಸ ಸಂಸ್ಥೆಯಿಂದ ಕಾರ್ಯಾಗಾರದ ಆಯೋಜನೆ




ಮನುವಿಕಾಸ ಸಂಸ್ಥೆ ಹಾಗೂ ಗ್ರೋ ಫಂಡ್ ಸಹಯೋಗದಲ್ಲಿ ಸಪ್ಟೆಂಬರ್ 13 ಮತ್ತು 14 ರಂದು ಮಧುವನ ಹೊಟೆಲ್‌ನ ಆರಾಧನ ಹಾಲ್‌ನಲ್ಲಿ "ಆಪರೇಶನಲ್ ಪ್ರೊಸೆಸ್ ಮ್ಯಾನ್ಯುವಲ್ ಪ್ರಿಪರೇಶನ್" ವಿಷಯದ ಕುರಿತು ಎರಡು ದಿನದ ಕಾರ್ಯಾಗಾರವನ್ನು ಆಯೋಜನೆ ಮಾಡಲಾಗಿತ್ತು.

ಕಾರ್ಯಾಗಾರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದ ಸ್ಕೋಡ್‌ವೆಸ್ (SCODWES) ಸಂಸ್ಥೆಯ ಮುಖ್ಯಸ್ಥರಾದ ಶ್ರೀ ವೆಂಕಟೇಶ್ ನಾಯ್ಕ ಮಾತನಾಡಿ ಇಂದಿನ ದಿನಮಾನಗಳಲ್ಲಿ ಸರ್ಕಾರದ ನಿಯಾಮವಳಿಗಳನ್ನು ಅನುಸರಿಸಿ ಯೋಜನೆಗಳನ್ನು ಜನರಿಗೆ ತಲುಪಿಸಲು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಬಹಳಷ್ಟು ಪ್ರಯಾಸವಾಗುತ್ತಿದೆ. ಹೊಸ ಬಗೆಯ ಆಲೋಚನೆಯನ್ನು ಹೊಂದಿ ಉತ್ತಮ ಹವ್ಯಾಸ ಉಳ್ಳವರಾಗಿ ಕಾಯಾ, ವಾಚಾ, ಮನಸಾ ಇದರೊಂದಿಗೆ ವೃತ್ತಿಪರವಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಯಶಸ್ವಿಯಾಗಿ ಸಂಸ್ಥೆಗಳನ್ನು ಮುನ್ನಡೆಸಲು ಸಾಧ್ಯ ಎಂದು ತಿಳಿಸಿದರು. ಒಳ್ಳೆಯ ಉದ್ದೇಶದೊಂದಿಗೆ ನಾವು ವೃತ್ತಿಪರ ಸಾಮಾಜಿಕ ಕಾರ್ಯಕರ್ತರಾದಾಗ ಯಶಸ್ಸನ್ನು ಕಾಣಬಹುದು. 'ನಮ್ಮ ಕನಸಿಗೆ ನಾವೇ ನಾಯಕರು ನಮ್ಮ ಕನಸನ್ನು ನಾವೇ ಬೆಳೆಸಬೇಕು'. ಮನುವಿಕಾಸ ಆಯೋಜಿಸಿರುವ ಈ ಕಾರ್ಯಾಗಾರ ಬಹಳ ಉಪಯುಕ್ತ ಹಾಗೂ ಅವಶ್ಯವಾಗಿದೆ ಎಂದು ಹೇಳಿದರು. ಅತಿಥಿಗಳಾಗಿ ಆಗಮಿಸಿದ ಹಾವೇರಿ ಜಿಲ್ಲೆಯ ವನಸಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಎಸ್.ಟಿ. ಬಳಿಗಾರ್ ಮಾತನಾಡಿ ಕಳೆದ ಮೂರು ದಶಕಗಳಿಂದ ನಾನು N.G.O ಗಳ ವಿವಿಧ ವಲಯಗಳಲ್ಲಿ ಕೆಲಸ ಮಾಡಿದ್ದೇನೆ. ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳನ್ನು ಕಟ್ಟಿ ಮುನ್ನಡೆಸುವುದು ಸುಲಭದ ಕೆಲಸವಲ್ಲ, ಸಾಕಷ್ಟು ಜನರು ಸಂಸ್ಥೆ ಆರಂಭಿಸಿ ಕೈ ಸುಟ್ಟುಕೊಂಡಿದ್ದಾರೆ. N.G.O ಗಳನ್ನು ಸ್ಥಾಪನೆ ಮಾಡಬೇಕಾದರೆ ಪ್ರಚಲಿತದಲ್ಲಿನ ವಾಸ್ತವಿಕತೆಯನ್ನು ಹತ್ತಿರದಿಂದ ಕಂಡಿರಬೇಕು ಎಂದು ತಮ್ಮ ಅನುಭವವನ್ನು ಹಂಚಿಕೊಂಡರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಕೆ.ಎನ್.ಹೊಸ್ಮನಿಯವರು ಶ್ರದ್ಧೆ ಹಾಗೂ ಮೌಲ್ಯಗಳ ಬಗೆಗೆ ಮಾತನಾಡಿ ಶ್ರದ್ಧೆಯಿಲ್ಲದೆ ಯಾರೂ ಕೂಡಾ ಸಾರ್ಥಕತೆ ಕಾಣಲು ಸಾಧ್ಯವಿಲ್ಲ. "ವಿಶ್ವದ ಎಲ್ಲಾ ರಹಸ್ಯದ ಬಾಗಿಲು ತೆರೆಯುವ ಕೀಲಿಕೈ ಶ್ರದ್ಧೆಯಾಗಿದೆ" ಎಂದರು. ಮೌಲ್ಯ ಎಂಬುದು ಪರಿವರ್ತನಾಶೀಲ ಆಗಿರುವಂತದ್ದು, ಮೌಲ್ಯ ಬದಲಾವಣೆಗೆ ಪರಿವರ್ತನೆಯೇ ಕಾರಣ. "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಮಾತಿನಿಂದ ಏನನ್ನೂ ಬಯಸದೆ ಜಗತ್ತಿಗೆ ಅರ್ಪಿಸುವುದೇ ಸೇವೆ. "ಭೌತಿಕ ಆಡಂಬರಕ್ಕಾಗಿ ಮಾಡದ ಯಾವ ಕೆಲಸಗಳೂ ಕೂಡಾ ಸೇವೆ" ಎಂದೆನಿಸುತ್ತದೆ ಎಂದು ಹೇಳಿದರು.

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ಗಣೇಶ ಹೆಗಡೆ, ಶ್ರೀ ವಿನಯ್ ಹೆಗಡೆ ವಿವಿಧ ತೆರಿಗೆಗಳು ಹಾಗೂ ಜಿ.ಎಸ್.ಟಿ ವಿಷಯಗಳ ಕುರಿತು ಮಾತನಾಡಿದರು. N.G.O ಗಳಲ್ಲಿ ಅವಶ್ಯಕವಾಗಿ ಪಾಲಿಸಬೇಕಾದ ತೆರಿಗೆ ನಿಯಮಗಳೇನು? ಯಾವ ಯಾವ ವಿಷಯಗಳಿಗೆ ತೆರಿಗೆ ವಿನಾಯಿತಿ ಇದೆ? ಎಂಬುದರ ಬಗ್ಗೆ ತಿಳಿಸಿಕೊಟ್ಟರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯನ್ನು ಸ್ಥಾಪಿಸಬೇಕಾದರೆ ನಿಶ್ಚಿತ ಗುರಿ ಅಥವಾ ಯೋಜನೆ ಮುಖ್ಯವಾಗಿ ಇರಬೇಕಾದ ಗುಣಗಳಾಗಿದ್ದು, ಎಂತಹ ಸಂದಿಗ್ಧ ಪರಿಸ್ಥಿತಿಯನ್ನೂ ಸಹ ಎದುರಿಸುವ ಚಾಕಚಕ್ಯತೆಯನ್ನು ಹೊಂದಿರಬೇಕಾಗುತ್ತದೆ. ಕೆಲಸದಲ್ಲಿ ಮುಂದೆ ಸಾಗುತ್ತಾ ನಾವು ಕೆಲಸದ ನೈಪುಣ್ಯತೆಯನ್ನು ಕಲಿಯಬೇಕು ಎಂದು ಹೇಳಿದರು. ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಪಾಲಿಸಬೇಕಾದ ನಿಯಮಗಳು, ಕರ್ತವ್ಯಗಳು, ಅನಿರೀಕ್ಷಿತವಾಗಿ ಬಂದೊದಗುವ ಸವಾಲುಗಳು, ಸಿಬ್ಬಂದಿಗಳ ಕೆಲಸ ಕೈಪಿಡಿಯಲ್ಲಿ ಇರಬೇಕಾದ ಬಹುಮುಖ್ಯ ಅಂಶಗಳ ಕುರಿತು ಮಾಹಿತಿ ನೀಡಿದರು. ಈ ಕಾರ್ಯಾಗಾರದಲ್ಲಿ ಸ್ಕೋಡ್‌ವೆಸ್, ವನಸಿರಿ ಮುಂತಾದ ಬೇರೆ ಬೇರೆ ಸ್ವಯಂ ಸೇವಾ ಸಂಸ್ಥೆಯ ಸಿಬ್ಬಂದಿಗಳು ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮನುವಿಕಾಸದ ಕಾರ್ಯಸಿದ್ಧಿ

# ಸಿದ್ದಿ ಸಮುದಾಯದ ಆತಿಥ್ಯ ತರಬೇತಿ ಸಂಪನ್ನ



ಮನುವಿಕಾಸ ಹಾಗೂ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ್ ಇವರ ಸಹಯೋಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಸಿದ್ದಿ ಸಮುದಾಯದ ಯುವಕ ಯುವತಿಯರಿಗೆ 60 ದಿನಗಳ ಆತಿಥ್ಯ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ದಿನಾಂಕ 27/09/2022 ರಂದು ಆತಿಥ್ಯ ತರಬೇತಿಯ ಸಮಾರೋಪ ಸಮಾರಂಭವು ಯಲ್ಲಾಪುರ ತಾಲೂಕಿನ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಜರುಗಿತು. ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಾಂತಾರಾಮ ಸಿದ್ದಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಮನುವಿಕಾಸ ಸಂಸ್ಥೆಯು ಕಳೆದ ಹತ್ತಾರು ವರ್ಷಗಳಿಂದ ಪರಿಸರ, ಶಿಕ್ಷಣ, ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡುತ್ತಾ ಬಂದಿದೆ. ಜಿಲ್ಲೆಯ ಪ್ರಮುಖ ಬುಡಕಟ್ಟು ಜನಾಂಗಗಳಲ್ಲಿ ಒಂದಾದ ಸಿದ್ದಿ ಸಮುದಾಯದ ಜನರನ್ನು ಸಹ ಸಮಾಜದ ಮುಖ್ಯ ಭೂಮಿಕೆಯಲ್ಲಿ ಗುರುತಿಸಿಕೊಳ್ಳಲು ಆತಿಥ್ಯ ತರಬೇತಿ ಕಾರ್ಯಕ್ರಮಗಳಂತಹ ಯೋಜನೆ ತುಂಬಾ ಸಹಕಾರಿಯಾಗಲಿದೆ. ಮನುವಿಕಾಸ ಸಂಸ್ಥೆಯು ಸಿದ್ದಿ ಸಮುದಾಯಕ್ಕೆ ತಂದಿರುವ ಯೋಜನೆಗಳು ಆರ್ಥಿಕವಾಗಿ ಸಮುದಾಯವು ಮುಂದೆ ಬರಲು ಅನುಕೂಲವಾಗಲಿವೆ. ಸಂಸ್ಥೆಯ ಈ ಕಾರ್ಯವು ಸಿದ್ದಿ ಸಮುದಾಯದ ಜನರು ಸದಾ ಸ್ಮರಿಸುವಂತದ್ದು ಎಂದು ಹೇಳಿದರು. ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ "ಮನುವಿಕಾಸ ನೆಲ, ಜಲ, ಪರಿಸರ ಸಂರಕ್ಷಣೆ ಹಾಗೂ ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ 19 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಾ ಬಂದಿದ್ದು, ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ್ ಇವರ ಸಹಕಾರದೊಂದಿಗೆ ಯಲ್ಲಾಪುರ ತಾಲೂಕಿನ ಸಿದ್ದಿ ಸಮುದಾಯದ ಅಭಿವೃದ್ಧಿಗಾಗಿ ಸ್ವ ಉದ್ಯೋಗ ಮಾಡುವ ಜನರಿಗೆ ಅಗತ್ಯ ಪರಿಕರಗಳನ್ನು ಹಾಗೂ ಜೇನು ಸಾಕಾಣಿಕೆ ಮಾಡಲು ಜೇನು ಪೆಟ್ಟಿಗೆಗಳು, ಕೋಳಿ ಸಾಕಾಣಿಕೆ ಮಾಡುವವರಿಗೆ ಕೋಳಿ ಮರಿಗಳನ್ನು ವಿತರಣೆ ಮಾಡಿದ್ದೇವೆ. ಸಿದ್ದಿ ಸಮುದಾಯದ ಜನರು ತೋಟಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನದಾಗಿ ತೊಡಗಿಸಿಕೊಳ್ಳಲು ಅಡಿಕೆ ಸಸಿಗಳು ಹಾಗೂ ನೀರಾವರಿ ವ್ಯವಸ್ಥೆ ಕಲ್ಪಿಸಲು ಬೇಕಾದ ಉಪಕರಣಗಳನ್ನು ಈಗಾಗಲೇ ಉಚಿತವಾಗಿ ನೀಡಿದ್ದೇವೆ. ರಸ್ತೆ ಬದಿಯಲ್ಲಿ ಅಂಗಡಿ ಹಾಕಲು ಬಯಸುವವರಿಗೆ 30,000 ರೂಪಾಯಿಗಳವರೆಗಿನ ವಿವಿಧ ವಸ್ತುಗಳನ್ನು ನೀಡಿದ್ದೇವೆ. ಸಿದ್ದಿ ಸಮುದಾಯದ ಯುವಕ – ಯುವತಿಯರಿಗೆ 60 ದಿನಗಳ ಆತಿಥ್ಯ ತರಬೇತಿಯನ್ನು ಸಹ ನೀಡುತ್ತಿದ್ದೇವೆ. ಕಲ್ಪಿಸಲಾದ ವಿವಿಧ ಯೋಜನೆಗಳ ಅನುಕೂಲತೆಯನ್ನು ಯೋಗ್ಯ ರೂಪದಲ್ಲಿ ಸದುಪಯೋಗ ಪಡೆದುಕೊಳ್ಳಬೇಕು" ಎಂದು ಕರೆ ನೀಡಿದರು. ಈ ಕಾರ್ಯಕ್ರಮದಲ್ಲಿ ಆತಿಥ್ಯ ತರಬೇತಿಯ ಶಿಬಿರಾರ್ಥಿಗಳು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಪವನ್ ಬೊಮ್ಮನಹಳ್ಳಿ, ಮೋಹನ್ ಸಿದ್ದಿ, ವಿಲ್ಸನ್ ಡಿಸೋಜಾ, ಚಂದನಾ ನಾಯ್ಕ್, ರಾಮಚಂದ್ರ ಸಿದ್ದಿ ಉಪಸ್ಥಿತರಿದ್ದರು.






# ಮನುವಿಕಾಸದ ವತಿಯಿಂದ ಅನುದಾನ ಕ್ರೋಢೀಕರಣ ತರಬೇತಿ ಆಯೋಜನೆ





ಮನುವಿಕಾಸ ಸ್ವಯಂಸೇವಾ ಸಂಸ್ಥೆಯು ಗ್ರೋ ಫಂಡ್‌ನ ಸಹಯೋಗದೊಂದಿಗೆ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗಾಗಿ ಮೂರು ದಿನಗಳ ಅನುದಾನ ಕ್ರೋಢಿಕರಣ ಮತ್ತು ಸಂವಹನ ತರಬೇತಿಯನ್ನು ದಿನಾಂಕ 1/12/2022 ರಿಂದ 3/12/2022 ರವರೆಗೆ ಸಿದ್ದಾಪುರ ತಾಲೂಕಿನ ಕರ್ಜಗಿಯ ನೆಲ–ಜಲ ಪರಿಸರ ಅಧ್ಯಯನ ಕೇಂದ್ರದಲ್ಲಿ ಕಾರ್ಯಗಾರವನ್ನು ಹಮ್ಮಿಕೊಂಡಿತ್ತು.

ತರಬೇತಿಯು ಸಿಬ್ಬಂದಿಗಳಲ್ಲಿ ಉತ್ತಮ ಸಂವಹನ ಕಲೆ, ನಿರ್ದಿಷ್ಟ ಪ್ರಸ್ತಾವನೆಯ ರಚನೆ, ಅನುದಾನ ನೀಡುವ ಸಂಸ್ಥೆಗಳ ಪಾಲ್ಗೊಳ್ಳುವಿಕೆ ಮತ್ತು ವಿವಿಧ ರೀತಿಯ ಪ್ರಸ್ತಾವನೆಯ ಬರವಣಿಗೆ, ಕೌಶಲ್ಯ ಅಭಿವೃದ್ಧಿ, ಮತ್ತು ಸಮಸ್ಯೆಗಳ ಹುಡುಕುವುದುರ ಬಗೆಗಿನ ಮುಖ್ಯ ಉದ್ದೇಶ ಹೊಂದಿತ್ತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟರವರು ತರಬೇತಿ ಉದ್ದೇಶಿಸಿ ಮಾತನಾಡಿ "ಉತ್ತಮ ಅನುದಾನ ಸಂಗ್ರಹಕಾರರಾಗಲು, ತಾಳ್ಮೆ, ಹೆಚ್ಚಿನ ಓದು, ಬ್ರೌಸಿಂಗ್, ಮಧ್ಯಸ್ಥಿಕೆದಾರರ ಜೊತೆ ಚರ್ಚೆ, ಮತ್ತು ವಿಷಯ ಹಂಚಿಕೆ ಮಾಡಬೇಕು" ಎಂದು ಸಲಹೆ ನೀಡಿದರು. ಯಾವುದೇ ಸಮಸ್ಯೆಯ ಮೇಲೆ ವಿಷಯ ಸೂಚಿ ರಚಿಸುವಾಗ ಅದರ ಜಾಗತಿಕ, ದೇಶೀಯ, ರಾಜ್ಯ, ಜಿಲ್ಲಾ ಮತ್ತು ತಾಲೂಕು ಮಟ್ಟದ ಹಂತವನ್ನು ಅರಿತುಕೊಂಡು ನಿರ್ದಿಷ್ಟ ಗುರಿ, ಬಲವಾದ ಕಾರ್ಯತಂತ್ರ, ಮತ್ತು ವಿವರವಾದ ಅಧ್ಯಯನವನ್ನು ಮಾಡಬೇಕು ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ಸಂಜೀವ್ ಕುಲಕರ್ಣಿಯವರು ಮಾತನಾಡಿ "ಸುಸ್ಥಿರ ಅಭಿವೃದ್ಧಿಯ ಗುರಿಗಳು (SDG) ಬಗ್ಗೆ ಕೂಲಂಕುಶ ವಿವರಣೆ ನೀಡಿ, ನಾವು ಕೈಗೊಳ್ಳುವ ಪ್ರಸ್ತಾವನೆಯು ಸುಸ್ಥಿರ ಅಭಿವೃದ್ಧಿಯ ಗುರಿಗಳ (SDG) ಯಾವುದೇ ಒಂದು ಗುರಿಗೆ ಸಂಪರ್ಕ ಹೊಂದಿರಬೇಕು" ಎಂದರು. ಯೋಜನೆಯಲ್ಲಿ ಒಂದು ಸಂಸ್ಥೆಯೊಂದಿಗೆ ಪಾಲುದಾರಿಕೆಯ ಮೊದಲು ಮತ್ತು ನಂತರ ಇರಬೇಕಾದ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿಸಿಕೊಟ್ಟರು.

ಪ್ರತಿಯೊಂದು ಅವಧಿ ಮುಗಿದ ನಂತರ ವಿಷಯದ ಅರ್ಥ ಮಂಡನೆಗೆಂದು ಗುಂಪು ಚಟುವಟಿಕೆ ನೀಡಲಾಗುತ್ತಿತ್ತು. ಇದರಲ್ಲಿ ಪರಿಸರ ಮಾಲಿನ್ಯ, ಬುಡಕಟ್ಟು ಜನಾಂಗ, ಹಿಂದುಳಿದ ಮಹಿಳೆಯರ ಜೀವನಮಟ್ಟ, ಹಾಲಕ್ಕಿ ಜನಾಂಗ, ವಲಸೆ, ತರಕಾರಿ ಬೆಳೆಗಾರರ ಸಮಸ್ಯೆ ಇವೆಲ್ಲದರ ಕುರಿತು ಚರ್ಚಿಸಿ ವಿಷಯ ಮಂಡನೆ ಮಾಡಲಾಯಿತು. ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರವರು ತರಬೇತಿಯಲ್ಲಿ ಮಾತನಾಡಿ ಅನುದಾನ ಕ್ರೋಢೀಕರಣ ಸಮಯದಲ್ಲಿ ಅನುದಾನ ಸಂಸ್ಥೆಗಳಿಗೆ ರಚಿಸಬೇಕಾದ ಪ್ರಸ್ತಾವನೆಗಳು, ಹಮ್ಮಿಕೊಳ್ಳಲಾಗುವ ಚಟುವಟಿಕೆಗಳ ಕ್ರಮಗಳು, ರಚನಾ ಕ್ರಮ, ಕಾರ್ಯ ತಂತ್ರ, ಯೋಜನೆಯ ಉದ್ದೇಶಗಳು, ಯೋಜನೆಯ ಪರಿಣಾಮ ಮತ್ತು ಪ್ರಭಾವ, ಲೆಕ್ಕ ಪತ್ರ ವ್ಯವಹಾರಗಳು, ಅನುದಾನ ಪಡೆವ ಪೂರ್ವದಲ್ಲಿ ಹಾಗೂ ಅನುದಾನ ಪಡೆದ ನಂತರದಲ್ಲಿ ಸಂಸ್ಥೆಗಳು ನಿರ್ವಹಿಸಬೇಕಾದ ಕ್ರಮಗಳು ಮೊದಲಾದ ವಿಷಯಗಳ ಬಗೆಗೆ ಸಮಗ್ರವಾಗಿ ಚರ್ಚಿಸಲಾಯಿತು. ಜತೆಗೆ ಅವಶ್ಯಕ ಮಾಹಿತಿಯನ್ನು ನೀಡಲಾಯಿತು. ಪ್ರತಿಯೊಂದು ವಿಷಯಗಳಿಗೂ ಪ್ರತ್ಯೇಕ ಗುಂಪು ಚಟುವಟಿಕೆಗಳನ್ನು ನೀಡಿ, ಸಿಬ್ಬಂದಿಗಳಿಂದ ಮಾಹಿತಿ ಕಲೆ ಹಾಕಲಾಯಿತು. ಮನುವಿಕಾಸ ಸಂಸ್ಥೆಯ 25ಕ್ಕೂ ಹೆಚ್ಚಿನ ಸಿಬ್ಬಂದಿಗಳು ಹಾಗೂ ಹತ್ತಕ್ಕೂ ಹೆಚ್ಚು ಬೇರೆ ಬೇರೆ ಸ್ವಯಂ ಸೇವಾ ಸಂಸ್ಥೆಗಳ ಸಿಬ್ಬಂದಿಗಳು ಈ ತರಬೇತಿಯಲ್ಲಿ ಭಾಗವಹಿಸಿದ್ದರು.

# ಮನುವಿಕಾಸದಿಂದ  ನೀರಿನ ಸಂರಕ್ಷಣೆ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಆಯೋಜನೆ




ಮನುವಿಕಾಸವು ಹನ್ಸ್ ಸೀಡೆಲ್ ಫೌಂಡೇಶನ್ (HSS) ಇವರ ಸಹಭಾಗಿತ್ವದೊಂದಿಗೆ ಸುಸ್ಥಿರ ಅಭಿವೃದ್ಧಿ ಗುರಿಗಳು(SDG) ಮತ್ತು ಜಲ ಸಂರಕ್ಷಣೆಯ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮವನ್ನು 21 ಡಿಸೆಂಬರ್ 2022 ರಂದು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕರ್ಜಗಿಯ ಗ್ರಾಮದ ನೆಲ ಜಲ ಮತ್ತು ಪರಿಸರ ಅಧ್ಯಯನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಹನ್ಸ್ ಸೀಡೆಲ್ ಫೌಂಡೇಶನ್ ನ ಕಾರ್ಯಕ್ರಮ ಅಧಿಕಾರಿಯಾದ ಶ್ರೀ ಸಂದೀಪ್ ದುಬೆ ಅವರು ಮಾತನಾಡಿ ಮನುವಿಕಾಸ ಮತ್ತು HSS ನ ಸಹಭಾಗಿತ್ವದ ಯೋಜನೆಯಲ್ಲಿ ಹಮ್ಮಿಕೊಂಡ ಗುರಿಗಳು ಮತ್ತು ಸಾಧಿಸಲಾದ ಅಂಕಿ ಅಂಶಗಳ ಬಗೆಗೆ ಶ್ಲಾಘಿಸಿದರು. ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ರವರು ಮಾತನಾಡಿ "ತಮ್ಮ ಸಂಸ್ಥೆಯು ಜಲ ಮತ್ತು ಸಂಪನ್ಮೂಲ ನಿರ್ವಹಣೆ, ಮಹಿಳಾ ಸಬಲೀಕರಣ, ಪರಿಸರ ಸಂರಕ್ಷಣೆ ಮತ್ತು ಕೌಶಲ್ಯಾಭಿವೃದ್ಧಿ ಬಗ್ಗೆ ಕೆಲಸ ನಿರ್ವಹಿಸುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಜನರ ಜೀವನಾಡಿಗಳಾದ ಅಘನಾಶಿನಿ, ಬೇಡ್ತಿ, ಮತ್ತು ವರದಾ ನದಿಗಳಲ್ಲಿನ ನೀರಿನ ಹರಿವು ನಿಧಾನಗತಿಯಲ್ಲಿ ಕ್ಷೀಣಿಸುತ್ತಿರುವುದರಿಂದ ಅವುಗಳ ಪುನರುಜ್ಜೀವನದ ಕುರಿತು ಮನುವಿಕಾಸ ಮತ್ತು ಹನ್ಸ್ ಸೀಡೆಲ್ ಫೌಂಡೇಶನ್ ಸಂಸ್ಥೆ ಇಟ್ಟ ಹೆಜ್ಜೆಯನ್ನು ವಿವರಿಸಿದರು. ಭೂಕುಸಿತ, ಅಕಾಲಿಕ ಮಳೆ, ಮತ್ತು ಪ್ರವಾಹವನ್ನು ನಿಭಾಯಿಸಲು ಉತ್ತರ ಕನ್ನಡ ಜಿಲ್ಲೆಯ ಅಗತ್ಯತೆಗಳಾದ ಜಲಾಯನ ನಿರ್ವಹಣೆ, ಮತ್ತು ಕೃಷಿಯಲ್ಲಿ ರೈತರ ಪಾತ್ರದ ಕುರಿತು ಮನುವಿಕಾಸ ಸಂಸ್ಥೆಯು ತನ್ನ ಕೆಲಸ ನಿರ್ವಹಿಸುತ್ತಿದೆ" ಎಂದರು. ಪಶ್ಚಿಮ ಘಟ್ಟದ ಕಾರ್ಯಪಡೆಯ ಮಾಜಿ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅವರು ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, "ಹಿಂದೆ ನಡೆದ ಪರಿಸರ, ಹವಾಮಾನ ಮತ್ತು ನೀರಿಗಾಗಿ ನಡೆದ ಹತ್ತು ಹಲವು ಚಳುವಳಿ, ರ್‍ಯಾಲಿ, ಹೋರಾಟಗಳು ವ್ಯರ್ಥವಾದ ರೀತಿಯನ್ನು ವಿವರಿಸಿ ಮನುವಿಕಾಸ ಸಂಸ್ಥೆಯು ಅದೇ ವಿಷಯಕ್ಕೆ ತನ್ನ ಅಗಾಧ ಪ್ರಯತ್ನ ಹಾಕಿ ಯಶಸ್ಸಿನತ್ತ ಸಾಗುತ್ತಿರುವುದು ಹೆಮ್ಮೆಯ ಸಂಗತಿ" ಎಂದು ಹೇಳಿದರು. ಗ್ರಾಮ ಪಂಚಾಯತ ಮಟ್ಟದಲ್ಲಿ SDG ಯು ಕಾರ್ಯಗತವಾಗಬೇಕು ಎಂದು ಆಶಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಪ್ರಸಾರಕ ಸಮಿತಿಯ ಅಧ್ಯಕ್ಷರಾದ ಶ್ರೀ ಶಶಿಭೂಷಣ ಹೆಗಡೆಯವರು ಮಾತಾನಾಡಿ "ಸ್ವಯಂ ಸೇವಾ ಸಂಸ್ಥೆಗಳು ಸಲ್ಲಿಸುವ ವರದಿಗಳಿಗೆ ಭಾದ್ಯತೆ ಇದ್ದು ಅದನ್ನು ಸರ್ಕಾರ ಪರಿಗಣಿಸಬೇಕು ಎಂದರು. ಕೆಲವೊಂದು ಯೋಜನೆಗಳ ವಿಕೇಂದ್ರಿಕರಣ ಮತ್ತು ಕೇಂದ್ರದಿಂದ ಪಂಚಾಯತ್‌ವರೆಗೂ ಜನರನ್ನು ಆ ಯೋಜನೆಯಲ್ಲಿ ತೊಡಗಿಸಿಕೊಂಡಾಗ ಮಾತ್ರ ಏಳಿಗೆ ಸಾಧ್ಯ ಎಂದು ಪರಿಸರ ನೀತಿ ಅನುಷ್ಠಾನದಲ್ಲಿ ನಾಗರಿಕರ ಪಾತ್ರ ಮಹತ್ವ" ಎಂದು ಅಭಿಪ್ರಾಯಿಸಿದರು. ಪ್ರಗತಿಪರ ರೈತರು ಮತ್ತು ಭೂ ಶಾಸ್ತ್ರಜ್ಞರಾದ ಶ್ರೀ ಬಾಲಚಂದ್ರ ಹೆಗಡೆ ಸಾಯಿಮನೆ ಅವರು ತಮ್ಮ ಸ್ವಂತ ಜಮೀನಿನಲ್ಲಿ ನಡೆಸಿದ ನಿರಂತರ ಪರಿಸರ ಅಧ್ಯಯನದಲ್ಲಿ ಪ್ರತ್ಯೇಕ ಎಲೆಗಳಿಗೆ ತಾಪಮಾನವನ್ನು ಅಳೆಯುವ ಉಪಕರಣವನ್ನು ಅಳವಡಿಸಿ 10 ವರ್ಷದಲ್ಲಿ 1.5 ರಷ್ಟು ತಾಪಮಾನ ಹೆಚ್ಚಾಗಿರುವ ಗಂಭೀರ ಅಂಶವನ್ನು ಹೊರಹಾಕಿ ಕೆಲವು ಸಸ್ಯಗಳ ಅಳಿವು ಉಳಿವಿನ ಬಗ್ಗೆ ಮಾತನಾಡಿ ಈ ಪ್ರದೇಶದಲ್ಲಿ ಇನ್ನು $2^{\circ}$ ಸೆ. ತಾಪಮಾನ ಹೆಚ್ಚಾದರೆ ಅಡಿಕೆ ಬೆಳೆಯು ನಾಶದ ಅಂಚಿಗೆ ಸಾಗುತ್ತದೆ ಎಂಬುದಾಗಿ ತಮ್ಮ ವಿಚಾರವನ್ನು ಮಂಡಿಸಿದರು. ಎಮ್. ಎಮ್ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲರು ಮತ್ತು ಭೂಗೋಳ ಶಾಸ್ತ್ರಜ್ಞರೂ ಆದ ಡಾ. ಕೋಮಲಾ ಭಟ್ಟ ಇವರು ಮನುವಿಕಾಸ ಸಂಸ್ಥೆಯು ಹೊಂದಿರುವ ಸಾಮಾಜಿಕ ಕಳಕಳಿಯನ್ನು ಕೊಂಡಾಡಿ ಪಾರಂಪರಿಕ ಜಲ ಸಂಪನ್ಮೂಲಗಳು ಮತ್ತು ಅದರ ಬಳಕೆಯನ್ನು ತಿಳಿಸಿಕೊಟ್ಟರು. ಬರಹಗಾರರು ಮತ್ತು ಪರಿಸರವಾದಿಗಳು ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯರವರು ಹಿಂದಿನ ತಲೆಮಾರು ಉಳುಮೆ ಮಾಡಿದ ಗದ್ದೆಯನ್ನೇ ಇಂದಿನ ತಲೆಮಾರುಗಳು ಉಳುಮೆ ಮಾಡುತ್ತಿದ್ದರೆ ಅದು ಸುಸ್ಥಿರ ಕೃಷಿ ಎಂಬ ಪರಿಕಲ್ಪನೆ ಇಂದಿನ ದಿನಮಾನಗಳಲ್ಲಿ ಪರಿಸರ ಯಾವ ರೀತಿ ಬದಲಾಗುತ್ತಿದೆ ಎಂಬುದಾಗಿ ವಿವರವಾಗಿ ತಮ್ಮ ವಿಚಾರ ಮಂಡನೆ ಮಾಡಿದರು. ಬರಹಗಾರರು ಮತ್ತು ಪರಿಸರವಾದಿಗಳು ಆದ ಶ್ರೀ ಶಿವಾನಂದ ಕಳವೆಯವರು ಮಾತನಾಡಿ 2015–16 ರಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ತಾವು ಕಂಡಂತಹ






ನೀರಿನ ಬವಣೆಯ ಬರಗಾಲದ ಚಿತ್ರಣವನ್ನು ಬಿಚ್ಚಿಟ್ಟು ನಾವು ಆಧುನಿಕತೆ ಹಿಂದೆ ಬಿದ್ದಿದ್ದೇವೆ ಪರಿಸರ ಅದಕ್ಕೆ ವ್ಯತಿರಿಕ್ತವಾದ ಪರಿಣಾಮವನ್ನು ನೀಡುತ್ತಿದೆ. ಮನುಷ್ಯನಿಗೆ ಇದನ್ನು ಎದುರಿಸಲಾಗುತ್ತಿಲ್ಲ ಎಂದು ತಮ್ಮ ವಿಷಯ ಮಂಡನೆಯಲ್ಲಿ ಹೇಳಿದರು. ಪ್ರಗತಿಪರ ರೈತರಾದ ಶ್ರೀ ಅಜ್ಜಪ್ಪ ಕುಳಗೋಡರವರು ದೇಶೀಯ ಬೀಜಗಳ ಸಂರಕ್ಷಣೆ ಮತ್ತು ಸಮಗ್ರ ಕೃಷಿ ಪದ್ಧತಿ ಬಗ್ಗೆ ಹೇಳಿದರು. ಕಡಲ ವಿಜ್ಞಾನಿಗಳಾದ ಶ್ರೀ ಪ್ರಕಾಶ ಮೇಸ್ತರವರು ಮಾತನಾಡಿ ಕರಾವಳಿ ಭಾಗಗಳಲ್ಲಿ ಬದಲಾಗುತ್ತಿರುವ ಹವಾಮಾನದಿಂದ ಅಲ್ಲಿಯ ಜನರು ಮತ್ತು ಸಮುದ್ರದಲ್ಲಿನ ಜಲಚರಗಳ ಮೇಲೆ ಯಾವ ರೀತಿ ಪರಿಣಾಮವನ್ನು ಬೀರುತ್ತಿದೆ ಎಂಬುದನ್ನು ವಿವರಿಸಿದರು. ಅಕಾಲಿಕ ಮಳೆ, ತಾಪಮಾನ ಹೆಚ್ಚಳ ಇವೆಲ್ಲವು ಸಹ ಪರಿಸರ ಬದಲಾವಣೆಯ ವಿವಿಧ ಹಂತಗಳಾಗಿವೆ ಎಂದರು. ಅನುಭವಿ ರೈತರ ಜೊತೆ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ರವರು ಪ್ರಶ್ನೋತ್ತರ ಅವಧಿಯನ್ನು ಕಲ್ಪಿಸಿ, ಎಲ್ಲಾ ರೈತಬಾಂಧವರು ಒಗ್ಗಟ್ಟಾಗಿ ಹವಾಮಾನ, ಪರಿಸರ ಮತ್ತು ಜಲ ಸಂರಕ್ಷಣೆಯ ಬಗ್ಗೆ ಒಂದು ಧೃಡ ಪ್ರಸ್ತಾಪ ಇಟ್ಟುಕೊಂಡು ಸರ್ಕಾರದ ಮುಂದೆ ಧ್ವನಿ ಎತ್ತಬೇಕು ಎಂಬ ಮಾತನ್ನು ಹೇಳಿದರು. *ಹವಾಮಾನ ಬದಲಾವಣೆ * ಕರ್ನಾಟಕ ಪರಿಸರದ ಮೇಲೆ ಕ್ರಮ ಮತ್ತು ಪರಿಣಾಮಗಳು *ಪಶ್ಚಿಮ ಘಟ್ಟದ ಅರಣ್ಯದ ಮೇಲೆ ಹವಾಮಾನ ವೈಪರಿತ್ಯದ ಕಾರಣಗಳು ಮತ್ತು ಅದರ ಪರಿಣಾಮಗಳು, *ಜಲ ಮತ್ತು ಸುಸ್ಥಿರ ಕೃಷಿ, *ನೀರಿನ ಸಂರಕ್ಷಣೆಯಲ್ಲಿ ವಹಿಸಬೇಕಾದ ಅಗತ್ಯ ಕ್ರಮ *ಭೂಮಿಯ ಭೂಭಾಗದ ಮೇಲೆ ಹವಾಮಾನ ಬದಲಾವಣೆಯ ಪ್ರಭಾವಗಳು ಮತ್ತು ಸರಿಪಡಿಸಲಾಗದ ಪರಿಣಾಮಗಳು, *ಕರಾವಳಿ ಪರಿಸರ ವ್ಯವಸ್ಥೆ ಮೇಲಿನ ಪರಿಣಾಮಗಳು ಜನಜೀವನ ಮತ್ತು ಬದಲಾವಣೆಯ ಅಗತ್ಯತೆಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಚರ್ಚಿಸಲಾಯಿತು. ಕಾರ್ಯಕ್ರಮದಲ್ಲಿ 3 ಜನರ ಒಂದು ಚರ್ಚಾ ಸಮಿತಿಯನ್ನಾಗಿ ರಚಿಸಿ ವಿಚಾರ ವಿಮರ್ಶೆ ನಡೆಸಲಾಯಿತು. ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಸ್ಥಳೀಯ ಗ್ರಾಮಪಂಚಾಯತ ಅಧಿಕಾರಿಗಳು ವಿವಿಧ ಕ್ಷೇತ್ರದ ವಿಷಯ ತಜ್ಞರುಗಳು, 30ಕ್ಕೂ ಹೆಚ್ಚು ಪ್ರಗತಿ ಪರ ರೈತರು ಮತ್ತು ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಬೆನ್ನೆಲುಬಾಗಿ ನಿಂತ ಮನುವಿಕಾಸ

ಮನುವಿಕಾಸ ಸಂಸ್ಥೆಯ ಮೂಲ ಉದ್ದೇಶಗಳಲ್ಲಿ ಶಿಕ್ಷಣ ಕೂಡ ಒಂದು ಈ ನಿಟ್ಟಿನಲ್ಲಿ ಮನುವಿಕಾಸ ಸಂಸ್ಥೆ ಗೀವ್ಇಂಡಿಯ ಫೌಂಡೇಶನ್ ಸಹಯೋಗದೊಂದಿಗೆ ಬಡ ಮಕ್ಕಳು ಮತ್ತು ತಂದೆ ತಾಯಿ ಇಲ್ಲದ ಮಕ್ಕಳ ಕಲ್ಯಾಣಕ್ಕಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ಬಡತನದಿಂದ ಮಕ್ಕಳಿಗೆ ಶಿಕ್ಷಣವನ್ನು ಪಡೆಯಲು ಕಷ್ಟವಾಗುತ್ತಿದೆ ಮತ್ತು ಶಿಕ್ಷಣದಲ್ಲಿ ಆಸಕ್ತಿಯನ್ನು ಕಳೆದು ಕೊಳ್ಳುತ್ತಿದ್ದಾರೆ. ಕೆಲ ಬಡಪಾಲಕರಿಗೆ ಮಕ್ಕಳ ಪಠ್ಯ ಪುಸ್ತಕಗಳನ್ನು ಪೂರೈಸುವುದು ಕಷ್ಟವಾದ್ದರಿಂದ ಮಕ್ಕಳನ್ನು ದುಡಿಮೆಗೆ ದುಡುತ್ತಿರುವುದು ಕಂಡುಬರುತ್ತಿದೆ. ಮಕ್ಕಳು ಶಾಲೆಯಲ್ಲಿ ಇತರೆ ಮಕ್ಕಳೊಂದಿಗೆ ಹೋಲಿಕೆ ಮಾಡಿಕೊಂಡು ತಮ್ಮಲ್ಲಿ ಕೀಳ–ರಿಮೆಯನ್ನು ಹೊಂದುವುದು ಇದರಿಂದ ಮಕ್ಕಳು ತಮ್ಮ ಆಸಕ್ತ ಕ್ಷೇತ್ರದಲ್ಲಿ ಮುಂದುವರೆಯಲು ಕಷ್ಟ ಸಾಧ್ಯ. ಕೆಲವು ಮಕ್ಕಳು ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದು ಪ್ರತಿಭಾನ್ವಿತರಾಗಿದ್ದರೂ ಸಹ ಬಡತನದಿಂದ ಅವರ ಅಧ್ಯಯನಕ್ಕೆ ಬೇಕಾಗುವಂತಹ ವಸ್ತುಗಳ ಅಭಾವದಿಂದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇವೆಲ್ಲವನ್ನು ಪರಿಗಣಿಸಿ ಮನುವಿಕಾಸ ಸಂಸ್ಥೆಯು ಮಕ್ಕಳ ಶಿಕ್ಷಣ ಮತ್ತು ಅವರಲ್ಲಿ ಶಿಕ್ಷಣದ ಬಗ್ಗೆ ಒಲವು ಮೂಡಿಸುವ ಸಲುವಾಗಿ ಬಡ ಮಕ್ಕಳಿಗೆ ಮತ್ತು ತಂದೆ ತಾಯಿ ಇಲ್ಲದ ಮಕ್ಕಳಿಗೆ ಒಂದು ವರ್ಷಕ್ಕೆ ಸಾಕಾಗುವಷ್ಟು ಪಠ್ಯೋಪಕರಣಗಳು ಹಾಗೂ ದಿನ ನಿತ್ಯ ಬಳಸುವ ವಸ್ತುಗಳನ್ನು ನೀಡಿ ಮಕ್ಕಳಲ್ಲಿ ಕಲಿಕೋತ್ಸಾಹವನ್ನು ಹೆಚ್ಚಿಸುವ ಮತ್ತು ಅವರಲ್ಲಿ ಕೀಳರಿಮೆಯನ್ನು ತೊಲಗಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಕಲಿಕಾ ಸಾಮಗ್ರಿಗಳನ್ನು ನೀಡಿ ಮಕ್ಕಳ ಮುಖದಲ್ಲಿ ನಗುವನ್ನು ಮೂಡಿಸುವಲ್ಲಿ ಮುಖ್ಯಪಾತ್ರವಹಿಸುತ್ತಿದೆ. ಪಠ್ಯೋಪಕರಣಗಳನ್ನು ನೀಡುವುದರಿಂದ ಮಕ್ಕಳಲ್ಲಿ ಕೀಳರಿಮೆಯು ತೊಲಗುವುದರ ಜೊತೆಗೆ ಆತ್ಮಸ್ಥೈರ್ಯವು ಬಲವಾಗುತ್ತದೆ. ಈ ರೀತಿಯ ಸಹಕಾರದಿಂದ ಕಲಿಕೆಯೆಡೆಗೆ ಮಕ್ಕಳು ಆಕರ್ಷಿತರಾಗುತ್ತಾರೆ ಎಂದು ಶಾಲಾ ಶಿಕ್ಷಕರು ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ ಸಂಸ್ಥೆಯನ್ನು ಶ್ಲಾಘಿಸುತ್ತಾರೆ.

# ಕುಂದಾಪುರದಲ್ಲಿ ಸ್ವ ಸಹಾಯ ಸಂಘದ ಮಹಿಳೆಯರಿಗೆ ಎರಡು ದಿನದ ಪರಿಕಲ್ಪನಾ ತರಬೇತಿಯ ಆಯೋಜನೆ







ಮನುವಿಕಾಸ ಸಂಸ್ಥೆ ಹಾಗೂ ಹೆಚ್.ಡಿ. ಎಫ್.ಸಿ ಬ್ಯಾಂಕ್ ಪರಿವರ್ತನಾ ಇವರ ಸಹಯೋಗದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ತ್ರಾಸಿ ಗ್ರಾಮದ ಕೊಂಕಣ ಖಾರ್ವಿ ಸಭಾಭವನದಲ್ಲಿ ಮಹಿಳಾ ಸ್ವ ಸಹಾಯ ಸಂಘದ ಸದಸ್ಯರಿಗೆ ಪರಿಕಲ್ಪನಾ ತರಬೇತಿಯನ್ನು ಅಗಸ್ಟ್ 25 ಮತ್ತು 26 ರಂದು ಆಯೋಜಿಸಲಾಗಿತ್ತು. ತ್ರಾಸಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಶೋಭಾರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ "ಮನುವಿಕಾಸ ಸಂಸ್ಥೆಯು ಕುಂದಾಪುರ ತಾಲೂಕಿಗೆ ಮಹಿಳಾ ಪ್ರಧಾನವಾದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಂದಿದೆ. ಮಹಿಳಾ ಮೀನು ಮಾರಾಟಗಾರರಿಗೆ ಎದುರಾದ ಸಮಸ್ಯೆಗಳನ್ನು ಪರಿಹರಿಸಿ ಅನುಕೂಲವಾಗುವಂತೆ ಮಾಡಿ" ಎಂದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ್ ಇದರ ಅಧಿಕಾರಿಗಳಾದ ಶ್ರೀ ರಾಘವೇಂದ್ರ ಆಚಾರ್ಯ ಅವರು ಮಾತನಾಡಿ "ಸ್ವ ಸಹಾಯ ಸಂಘಗಳು ಉಳಿತಾಯದ ಜೊತೆಯಲ್ಲಿ ಸಂಘಟನೆ ಮತ್ತು ಒಗ್ಗಟ್ಟಿನ ಮನೋಭಾವನೆಯನ್ನು ಬೆಳೆಸುತ್ತವೆ. ಸಂಘಗಳು ಠರಾವು ಪುಸ್ತಕ ಮತ್ತಿತರ ದಾಖಲಾತಿಗಳನ್ನು ಸರಿಯಾಗಿ ನಿರ್ವಹಣೆ ಮಾಡುವುದರಿಂದ ಪಾರದರ್ಶಕವಾದ ವ್ಯವಹಾರಗಳನ್ನು ನಡೆಸಲು ಬಹಳಷ್ಟು ಸಹಕಾರಿ ಆಗುತ್ತದೆ" ಎಂದು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಕೆನರಾ ಬ್ಯಾಂಕ್‌ನ ಶ್ರೀಮತಿ ಆಶಾಲತಾ ಅವರು ಮಾತನಾಡಿ "ಬ್ಯಾಂಕ್‌ನಲ್ಲಿ ಖಾತೆಗಳ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದಂತೆ ಸ್ವ ಉದ್ಯೋಗ ಮಾಡಲಿಚ್ಛಿಸುವ ಸ್ವ ಸಹಾಯ ಸಂಘಗಳಿಗೆ ವಿಶೇಷ ಸಾಲ ಸೌಲಭ್ಯವಿದ್ದು ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕು, ಬ್ಯಾಂಕ್ ವ್ಯವಹಾರವನ್ನು ಮಾಡುವಾಗ ನೀಡುವ ಚೆಕ್ ಬುಕ್‌ಗಳನ್ನು ಬ್ಯಾಂಕ್‌ನ ನಿಯಮಗಳಿಗೆ ಅನುಸಾರವಾಗಿ ನಿರ್ವಹಣೆ ಮಾಡಬೇಕು, ಯಾವುದೇ ಕಾರಣಕ್ಕೂ ದುರುಪಯೋಗ ಮಾಡಬಾರದು" ಎಂದು ಸಲಹೆಯನ್ನು ನೀಡಿದರು. ಕಾರ್ಯಾಗಾರವನ್ನು ಉದ್ದೇಶಿಸಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ "ಮನುವಿಕಾಸ ಸಂಸ್ಥೆಯು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಯೋಗದಲ್ಲಿ ಮೀನು ಮಾರಾಟ ಮಾಡುವ ಮಹಿಳೆಯರಿಗೆ ಮೀನುಗಳ ಸಂಸ್ಕರಣೆಗೆ ಸಹಕಾರಿಯಾಗುವ ಫ್ರೀಜರ್ ಮತ್ತಿತರ ಅಗತ್ಯ ಪರಿಕರಗಳನ್ನು ನೀಡಲಾಗುತ್ತಿದೆ. ಮಹಿಳೆಯರು ಸ್ವ ಉದ್ಯೋಗಿಗಳಾಗಲು ಪ್ರೋತ್ಸಾಹಿಸಲು ಅವಶ್ಯ ವಸ್ತುಗಳನ್ನು ನೀಡುತ್ತಿದ್ದೇವೆ" ಎಂದರು. ಸ್ವ ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು ಆಯ್ದ ಕೆಲ ಫಲಾನುಭವಿಗಳಿಗೆ ಹೊಲಿಗೆ ಯಂತ್ರ, ಝೆರಾಕ್ಸ್ ಯಂತ್ರ, ಫ್ರೀಜರ್, ಮಿಕ್ಸರ್, ಫಿಶ್‌ನೆಟ್‌ಗಳನ್ನು ಉಚಿತವಾಗಿ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಪವನ್ ಬೊಮ್ಮನಹಳ್ಳಿ, ಮೋಹನ್ ಸಿದ್ದಿ, ಜಗದೀಶ್ ನಾಯ್ಕ್, ಸುಬ್ಬಾರಾವ್, ಕುಮಾರ್ ನಾಯ್ಕ್ ಉಪಸ್ಥಿತರಿದ್ದರು.






# ಮನುವಿಕಾಸ ಸಂಸ್ಥೆಯಿಂದ ರೈತರಿಗೆ ಕೃಷಿ ಅಧ್ಯಯನ ಪ್ರವಾಸ ಆಯೋಜನೆ



ನವಂಬರ್ 4, 2022 ರಂದು ಮನುವಿಕಾಸ ಸ್ವಯಂಸೇವಾ ಸಂಸ್ಥೆ ಹಾಗೂ HSS ಫೌಂಡೇಶನ್ ಸಹಯೋಗದೊಂದಿಗೆ ರೈತರಿಗಾಗಿ ಒಂದು ದಿನದ ಅಧ್ಯಯನ ಪ್ರವಾಸವನ್ನು ಧಾರವಾಡ ಜಿಲ್ಲೆಯ 'ನೇಚರ್ ಫಸ್ಟ್ ಇಕೊ ವಿಲೇಜ್' ನಲ್ಲಿ ಆಯೋಜಿಲಾಗಿತ್ತು.

**ಈ ಅಧ್ಯಯನ ಪ್ರವಾಸದ ಆಯೋಜನೆಯ ಮುಖ್ಯ ಉದ್ದೇಶವೆಂದರೆ**

* ರೈತರಿಗೆ ಪರಿಸರ ಸಂರಕ್ಷಣೆ, ಹವಾಮಾನ ಬದಲಾವಣೆಯ ಮಹತ್ವದ ಬಗೆಗೆ ಅರಿವು ಮೂಡಿಸುವಿಕೆ.
* ನೀರಿಂಗಿಸುವಿಕೆ ನೀರಿನ ಮಹತ್ವ ಅಂತರ್ಜಲದ ಪುನಶ್ಚೇತನ ಮೊದಲಾದ ಪರಿಸರ ಸ್ನೇಹಿ ಕಾರ್ಯಚಟುವಟಿಕೆಗಳ ಮೂಲಕ ಪರಿಸರ ಜಾಗೃತಿಯನ್ನು ಮೂಡಿಸುವುದು.
* ಸಾವಯವ ಕೃಷಿ, ವೃಕ್ಷ ಕೃಷಿ ಪದ್ಧತಿ, ಮಿಶ್ರ ಹಾಗೂ ಸಮ್ಮಿಶ್ರ ಕೃಷಿ ಪದ್ಧತಿಗಳ ಅನುಷ್ಠಾನದ ಪ್ರಾತ್ಯಕ್ಷಿಕೆಯನ್ನು ರೈತರಿಗೆ ಒದಗಿಸುವುದು.
* ನವೀಕರಿಸಬಹುದಾದ ಸಂಪನ್ಮೂಲಗಳ ಸಮರ್ಪಕ ಬಳಕೆಗಳ ಮೂಲಕ ಪರಿಸರ ಸಮತೋಲನವನ್ನು ಹೇಗೆ ಕಾಯ್ದುಕೊಳ್ಳಬಹುದು ಎನ್ನುವದರ ಬಗೆಗೆ ಜಾಗೃತಿ ಮೂಡಿಸುವುದು.
* ಹವಾಮಾನ ವೈಪರಿತ್ಯದಿಂದ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಮತ್ತು ಅದನ್ನು ತಡೆಯುವ ಬಗೆಗೆ ರೈತರಲ್ಲಿ ಅರಿವು ಮೂಡಿಸುವುದು.
* ನೀರಿಂಗಿಸುವ ಘಟಕಗಳು, ನೀರಿನ ಹರಿವು ಮತ್ತು ಅದರ ಬಗೆಗಿನ ಪ್ರಾತ್ಯಕ್ಷಿಕತೆಯನ್ನು ರೈತ ಸಮುದಾಯಕ್ಕೆ ಒದಗಿಸುವುದು.
* ಎರೆಹುಳು ಗೊಬ್ಬರ ಮತ್ತು ಅದರ ತಯಾರಿಕೆಯ ಬಗೆಗೆ ರೈತ ಸಮುದಾಯದಲ್ಲಿ ಅರಿವನ್ನು ಮೂಡಿಸುವುದು
* ರೈತ ಸಮುದಾಯ ಅಳವಡಿಸಿಕೊಳ್ಳಬಹುದಾದ ಸರಳ ಮತ್ತು ಸುಲಭ ಖರ್ಚಿನ ಮಾದರಿಗಳನ್ನು ನಿರ್ಮಾಣ ಮಾಡುವುದರ ಮೂಲಕ ಅವರಿಗೆ ಪರಿಸರ ಪೂರಕ ಚಟುವಟಿಕೆಗಳನ್ನು ರೂಪಿಸಲು ಪ್ರೇರೇಪಿಸುವುದು.
* ಅನೂಹ್ಯ ಕೃಷಿ ಬೆಳವಣಿಗೆಗಳು ಮತ್ತು ಹೊಸ ಆವಿಷ್ಕಾರಗಳ ಬಗೆಗೆ ಒಂದೇ ಸೂರಿನಡಿಯಲ್ಲಿ ರೈತರಿಗೆ ಮಾಹಿತಿ ನೀಡುವದು.
* ಸಮಗ್ರ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಲಭ್ಯವಿರುವ ನೀರಿನ ಮೂಲಗಳಿಂದ ಹೇಗೆ ಯಶಸ್ವಿಯಾಗಿ ಕೈಗೊಳ್ಳುವುದು ಮತ್ತು ಅದರ ಪ್ರಯೋಜನಗಳನ್ನು ತಿಳಿಸಿಕೊಡುವುದು.

ಉತ್ತರ ಕನ್ನಡ ಮತ್ತು ಹಾವೇರಿ ಜಿಲ್ಲೆಯ 75ಕ್ಕೂ ಹೆಚ್ಚು ರೈತರು ಈ ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಂಡಿದ್ದರು., ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ, 'ನೇಚರ್ ಫಸ್ಟ್ ಇಕೋ ವಿಲೇಜ್' ನ ಸಂಸ್ಥಾಪಕರಾದ ಶ್ರೀ ತಿಮ್ಮಾಪುರ ಆರ್.ಜಿ, ನಿರ್ದೇಶಕ ಮಂಡಳಿಯ ಸದಸ್ಯರಾದ ಶ್ರೀ ಹರ್ಷವರ್ಧನ ಶೀಲವಂತ ಸೇರಿದಂತೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಈ ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಂಡಿದ್ದರು.



